# 'ಮೋದಿಗೆ ಉದ್ಯಮಿಗಳ ಗೆಳೆತನದ ರಹಸ್ಯ ಬಯಲಾಗುವ ಆತಂಕ'

■ **ವಿಕ ಸುದ್ದಿಲೋಕ** ಬೆಂಗಳೂರು

ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ತನ್ನ ಉದ್ಯಮ ಮಿತ್ರರ ಆಸ್ತಿಯ ದಿಢೀರ್ ಏರಿಕೆಯ ಹಿಂದಿನ ಸತ್ಯ ಬಯಲಾಗುವ ಆತಂಕ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕಾಡುತ್ತಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ. ಇದೇ ಕಾರಣಕ್ಕೆ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ದೇಶದ ಜನರ ಪಿತ್ರಾರ್ಜಿತ ಆಸ್ತಿಯ ಮರುಹಂಚಿಕೆ ಮಾಡಲಿದೆ ಎಂದು ಗುಲ್ಲೆಬ್ಬಿಸಿದ್ದಾರೆ ಎಂದು ಅವರು ಕಿಡಿಕಾರಿದ್ದಾರೆ.



ಈ ಕುರಿತು ಮಾಧ್ಯಮ ಪ್ರಕಟಣೆ ಬಿಡುಗಡೆ ಮಾಡಿರುವ ಅವರು, ''ಮೋದಿ ಹೇಳಿಕೆ ಹಿಂದಿನ ನಿಜವಾದ ಉದ್ದೇಶ ಜನರ ಮೇಲಿನ ಕಾಳಜಿಯೂ ಅಲ್ಲ, ದೇಶದ ಮೇಲಿನ ಪ್ರೀತಿಯೂ ಅಲ್ಲ,'' ಎಂದು ಲೇವಡಿ ಮಾಡಿದ್ದಾರೆ.

''2014ರಲ್ಲಿ ಜಾಗತಿಕ ಶ್ರೀಮಂತರ ಪಟ್ಟಿಯಲ್ಲಿ 41ನೇ ಸ್ಥಾನದಲ್ಲಿದ್ದ ಅಂಬಾನಿ 2023ರ ವೇಳೆಗೆ 9ನೇ ಸ್ಥಾನಕ್ಕೇರಿದ್ದು, ಮೋದಿ ಕೃಪಕಟಾಕ್ಷದಿಂದ 10 ವರ್ಷಗಳಲ್ಲಿ ಆತನ ಆಸ್ತಿ ಶೇ. 350ರಷ್ಟು ಹೆಚ್ಚಳವಾಗಿದೆ. ಅದಾನಿಯ ಆಸ್ತಿ ಒಟ್ಟು ಮೌಲ್ಯ 60 ಸಾವಿರ ಕೋಟಿಯಿಂದ 70 ಲಕ್ಷ ಕೋಟಿ ರೂ.ಗೆ ಏರಿದೆ. ಮೋದಿ ತಮಗೆ ಮತ ನೀಡಿದ ಮತದಾರರನ್ನು ಕೈಬಿಟ್ಟರೂ ತಮ್ಮನ್ನು ನಂಬಿದ ಉದ್ಯಮಿಗಳನ್ನು ಕೈಬಿಡುವವರಲ್ಲ'' ಎಂದು ಸಿಎಂ ವ್ಯಂಗ್ಯವಾಡಿದ್ದಾರೆ. ''ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ನ್ಯಾಯ ಪತ್ರಕ್ಕೆ ಜನರಿಂದ ಅಭೂತಪೂರ್ವ ಸ್ಪಂದನೆ ವ್ಯಕ್ತವಾಗುತ್ತಿದೆ. ಈ ಸ್ಪಂದನೆ ಮತಗಳಾಗಿ ಪರಿವರ್ತನೆಗೊಂಡು ಕಾಂಗ್ರೆಸ್ ಗೆದ್ದರೆ ತಮ್ಮ ಪದವಿಗೆ ಸಂಚಕಾರದ ಜತೆಗೆ, ತಮ್ಮ ಗೆಳೆತನದ ಹಿಂದಿರುವ ಗುಟ್ಟು ರಟ್ಟಾಗುತ್ತದೆ ಎಂದು ಮೋದಿ ಆತಂಕಗೊಂಡಿದ್ದಾರೆ. ಅದಕ್ಕಾಗಿ ಕಾಂಗ್ರೆಸ್ ಬಗ್ಗೆ ಜನರಲ್ಲಿ ಭಯ ಹುಟ್ಟಿಸುವ ಮತ್ತು ಅಪಪ್ರಚಾರ ಮಾಡುವ ಕೀಳು ಮಟ್ಟಕ್ಕೆ ಇಳಿದಿದ್ದಾರೆ,'' ಎಂದು ದೂರಿದ್ದಾರೆ.

**ಪಿಎಂಗೆ ಸವಾಲು:** ''ಮೋದಿ ಅವರು ಮೀಸಲು ವಿವಾದ ಸೃಷ್ಟಿಸಿ ರಾಜಕೀಯ ಲಾಭ ಪಡೆಯುವ ಹುನ್ನಾರ ನಡೆಸಿದ್ದು, ಅವರಿಗೆ ನಿಜವಾದ ಬದ್ಧತೆ ಇದ್ದರೆ ಜನಸಂಖ್ಯೆಗೆ ಅನುಗುಣವಾಗಿ ಮೀಸಲು ನಿಗದಿಪಡಿಸುವ ಶಾಶ್ವತ ಪರಿಹಾರಕ್ಕೆ ಸಿದ್ದರಾಗಲಿ ಮತ್ತು ಅದನ್ನು ಚುನಾವಣಾ ಭರವಸೆಯಾಗಿ ಘೋಷಿಸಬೇಕು,'' ಎಂದು ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

''ಚುನಾವಣೆಯಲ್ಲಿ ಸೋಲಿನ ಭೀತಿ ಎದುರಾಗಿರುವ ಕಾರಣಕ್ಕೆ ಮೋದಿಗೆ ಹಿಂದುಳಿದ ಜಾತಿಗಳು ಮತ್ತು ದಲಿತರ ನೆನಪಾಗಿದೆ. ಇದು ಮೊಸಳೆ ಕಣ್ಣೀರು ಎನ್ನುವುದನ್ನು ಅರ್ಥಮಾಡಿಕೊಳ್ಳುವಷ್ಟು ಹಿಂದುಳಿದ ಜಾತಿಗಳು ಮತ್ತು ದಲಿತರು ಜಾಣರಿದ್ದಾರೆ. ಇಂತಹ ಗಿಮಿಕ್ ಕರ್ನಾಟಕದ ನೆಲದಲ್ಲಿ ನಡೆಯಲಾರದು,'' ಎಂದಿದ್ದಾರೆ.






## ರಾಮಮಂದಿರದ ಸ್ತಂಭಗಳಲ್ಲಿ ಮೂರ್ತಿ ಕೆತ್ತನೆ | ಎರಡೂವರೆ ಸಾವಿರ ರೇಖಾಚಿತ್ರಗಳ ಹೊಣೆ

# ಅಯೋಧ್ಯೆಯಲ್ಲಿ ಧಾರವಾಡಿ ಕೈಚಳಕ

■ **ನಿಜಗುಣಿ ದಿಂಡಲಕೊಪ್ಪ** ಧಾರವಾಡ

nijaguni.dindalkoppa@timesgroup.com

ಅಯೋಧ್ಯೆ ರಾಮಮಂದಿರದಲ್ಲಿ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಕೆತ್ತಿದ ರಾಮಲಲ್ಲಾ ವಿಗ್ರಹ ಪ್ರತಿಷ್ಠಾಪನೆ ನಾಡಿನ ಹೆಮ್ಮೆಯಾಗಿದೆ. ಈಗ ಮಂದಿರದ ಸ್ತಂಭಗಳಲ್ಲಿ ಧಾರವಾಡದ ರವೀಂದ್ರ ಆಚಾರ್ ವಿನ್ಯಾಸದ ರೇಖಾಚಿತ್ರಗಳ ನೀಲಿನಕ್ಷೆ ಆಧರಿಸಿ ಕೆತ್ತನೆ ನಡೆದಿರುವುದು ಕನ್ನಡಿಗರಿಗೆ ಮತ್ತೊಂದು ಗರಿ ಮೂಡಿಸಿದೆ.

ಪ್ರತಿ ಸ್ತಂಭಗಳಲ್ಲಿಯೂ ಶಾಸ್ತ್ರೋಕ್ತವಾಗಿ 8 ದೇವಕನ್ಯೆಯರು, ತಲಾ 4 ವೀರಾಲಿಕಾ ಹಾಗೂ ದೇವರ ವಿಗ್ರಹ ಕೆತ್ತಲಾಗುತ್ತಿದೆ. ರವೀಂದ್ರ ಆಚಾರ್ಯರ ರೇಖಾಚಿತ್ರ ಆಧಾರವಾಗಿಟ್ಟುಕೊಂಡು ಕರ್ನಾಟಕ, ರಾಜಸ್ಥಾನ, ಒಡಿಶಾದ ನೂರಾರು ಶಿಲ್ಪಿಗಳು ಕೆತ್ತನೆ ಕೈಗೊಂಡಿದ್ದಾರೆ.

ಮಂದಿರ 3 ಅಂತಸ್ತಿನಲ್ಲಿ ನಿರ್ಮಿಸಲಾಗಿದೆ. ನೆಲಮಹಡಿಯಲ್ಲಿ ರಾಮಲಲ್ಲಾ ಮೂರ್ತಿ ಪ್ರತಿಷ್ಠಾಪನೆಗೊಂಡಿದೆ. ಇಲ್ಲಿ 160 ಸ್ತಂಭಗಳಿದ್ದು ಪ್ರತಿ ಕಂಬದಲ್ಲಿ 16 ಮೂರ್ತಿಗಳಂತೆ ಒಟ್ಟು 2,560 ಮೂರ್ತಿಗಳ ಜತೆಗೆ ಬಳ್ಳಿ, ಹೂವು, ದೀಪಗಳ ಕಲಾಕೃತಿ ಕೆತ್ತನೆ ಆಗುತ್ತಿದೆ. ನೃತ್ಯಮಂಟಪದಲ್ಲಿ ಶಿವ, ರಂಗಮಂಟಪದಲ್ಲಿ ಗಣೇಶ ಹಾಗೂ ಗೋದಮಂಟಪದ ಸ್ತಂಭಗಳಲ್ಲಿ ವಿಷ್ಣುವಿನ ಅವತಾರ ಕೆತ್ತಲಾಗುತ್ತಿದೆ. ಈಗಾಗಲೇ ಶೇ. 95ರಷ್ಟು ಕೆಲಸ ಮುಗಿದಿದೆ.

> ನೆಲಮಹಡಿ ಸ್ತಂಭಗಳಲ್ಲಿ ಮೂರ್ತಿ ಕೆತ್ತನೆ ಬಹುತೇಕ ಪೂರ್ಣಗೊಂಡಿದೆ. ಮೊದಲ ಮಹಡಿ ಕೆಲಸ ಇನ್ನೆರಡು ತಿಂಗಳಲ್ಲಿ ಆರಂಭಗೊಳ್ಳಲಿದೆ. ಟ್ರಸ್ಟ್ ನೀಡಿದ ಮಾದರಿಯ ಚಿತ್ರದ ನೀಲನಕ್ಷೆ ಸಿದ್ಧಪಡಿಸಿ ಅದರಂತೆ ಮೂರ್ತಿಗಳ ಕೆತ್ತನೆ ಆಗಿದೆಯೇ ಎಂಬುದನ್ನು ಗಮನಿಸುವ ಜವಾಬ್ದಾರಿ ನನ್ನ ಮೇಲಿದೆ. ದೇಶದ ಐತಿಹಾಸಿಕ ಮಂದಿರದಲ್ಲಿನ ಸ್ತಂಭಗಳ ಮೇಲೆ ನನ್ನ ವಿನ್ಯಾಸಗಳು ಮೂಡುತ್ತಿರುವುದು ನನ್ನ ಹೆಮ್ಮೆ.
>
> **-ರವೀಂದ್ರ ಆಚಾರ್** ಧಾರವಾಡ ರೇಖಾಚಿತ್ರಗಾರ



ಮೊದಲ ಮಹಡಿ ರಾಮದರ್ಬಾರ್ ಸಭಾಂಗಣದ 132 ಸ್ತಂಭಗಳ ಮೇಲೆಯೂ ಕೆತ್ತನೆಗೆ 2,112 ರೇಖಾಚಿತ್ರ ಬಿಡಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಮೇ-ಜೂನ್‌ನಲ್ಲಿ ಕೆತ್ತನೆ ಆರಂಭಗೊಳ್ಳಲಿದೆ ಎಂದು ರವೀಂದ್ರ ಆಚಾರ್ ಅವರು 'ವಿಕ'ಕ್ಕೆ ತಿಳಿಸಿದರು.

**13, 21 ಇಂಚಿನ ಮೂರ್ತಿಗಳು:** ನೆಲಮಹಡಿ ಸ್ತಂಭಗಳ ಮೇಲೆ 13 ಇಂಚಿನ ದೇವಕನ್ಯೆ ಹಾಗೂ ವೀರಾಲಿಕಾ ಮೂರ್ತಿ ಕೆತ್ತಲಾಗುತ್ತಿದೆ. 21 ಇಂಚಿನ ಗಣೇಶ, ವಿಷ್ಣು ಹಾಗೂ ಶಿವನ ಅವತಾರ ಕೆತ್ತನೆ ನಡೆದಿದೆ. ಮೊದಲ ಮಹಡಿ ಸ್ತಂಭಗಳಲ್ಲಿ ಮೂರ್ತಿಗಳ ಆಳತೆ ಬಗ್ಗೆ ಇನ್ನಷ್ಟೇ ಟ್ರಸ್ಟ್ ಕಮಿಟಿ ನಿರ್ದೇಶನ ನೀಡಬೇಕಿದೆ. ಟ್ರಸ್ಟ್‌ನವರು ಎರಡನೇ ಮಹಡಿ ಪರಿಕಲ್ಪನೆ ಬಹಿರಂಗಪಡಿಸಿಲ್ಲ.

**ದಿನಕ್ಕೆ 4-5 ಡ್ರಾಯಿಂಗ್:** ರವೀಂದ್ರ ಆಚಾರ್ ಹಾವೇರಿ ಜಿಲ್ಲೆ ರಾಣೆಬೆನ್ನೂರು ಮೂಲದವರಾಗಿದ್ದು, ಧಾರವಾಡದಲ್ಲಿ ನೆಲೆಸಿದ್ದಾರೆ. ಶ್ರೀಗುರುಕೃಪ ಶಿಲ್ಪಕಲಾ ಮಂದಿರ ಆರಂಭಿಸಿ ಕೃಷ್ಣಶಿಲೆ, ಅಮೃತ ಶಿಲೆಗಳಲ್ಲಿ ಮೂರ್ತಿ ಕೆತ್ತುತ್ತಿದ್ದಾರೆ. ಅಯೋಧ್ಯೆ ಮಂದಿರದ ಸ್ತಂಭಗಳ ಮೇಲೆ ಮೂರ್ತಿ ನೀಲನಕ್ಷೆಗೆ ಟ್ರಸ್ಟ್ ಕಮಿಟಿ ಆಹ್ವಾನಿಸಿತ್ತು. ಮಹಾರಾಷ್ಟ್ರ, ರಾಜಸ್ಥಾನ, ಗುಜರಾತ್, ಒಡಿಶಾ, ತಮಿಳುನಾಡಿನ ಕಲಾವಿದರು ಮಾದರಿ ಕಳುಹಿಸಿದ್ದರು. ರವೀಂದ್ರ ರೇಖಾಚಿತ್ರಗಳು ಆಯ್ಕೆ ಆಗಿದ್ದು ವಿಶೇಷ. ಮಂದಿರ ತುರ್ತಾಗಿ ಪೂರ್ಣಗೊಳ್ಳಬೇಕೆಂಬ ನಿರ್ದೇಶನ ಇದ್ದಿದ್ದರಿಂದ ರವೀಂದ್ರ ದಿನಕ್ಕೆ 4-5 ಡ್ರಾಯಿಂಗ್ ಬಿಡಿಸುತ್ತಿದ್ದಾರೆ.

## ಮೇನ್ಸ್ ಫಲಿತಾಂಶ ಪ್ರಕಟ

# ಶಾನ್ವಿ, ಸಾಯಿ, ಅಮೋಘ್ ರಾಜ್ಯದ ಜೆಇಇ ಟಾಪರ್ಸ್

■ **ವಿಕ ಸುದ್ದಿಲೋಕ** ಬೆಂಗಳೂರು

ಐಐಟಿ ಮತ್ತು ಎನ್‌ಐಟಿ ಸೇರಿದಂತೆ ಪ್ರಮುಖ ತಾಂತ್ರಿಕ ಸಂಸ್ಥೆಗಳಿಗೆ ಪ್ರವೇಶ ಕಲ್ಪಿಸಲು ನಡೆಸುವ ಜೆಇಇ ಮೇನ್ಸ್-2ರ ಫಲಿತಾಂಶ ಪ್ರಕಟವಾಗಿದೆ. ಶೇ.100ರಷ್ಟು ಅಂಕ ಪಡೆದಿರುವ ಶಾನ್ವಿ ಜೈನ್, ಸಾಯಿ ನವನೀತ್ ಮುಕುಂದ್ ಮತ್ತು ಅಮೋಘ್ ಅಗರ್ವಾಲ್ ರಾಜ್ಯದ ಟಾಪರ್‌ಗಳಾಗಿ ಹೊರಹೊಮ್ಮಿದ್ದಾರೆ.

ರಾಜ್ಯದ ಶಾನ್ವಿ ಜೈನ್ ಅಖಿಲ ಭಾರತ ಮಟ್ಟದಲ್ಲಿ 34ನೇ ರ‍್ಯಾಂಕ್ ಪಡೆದಿದ್ದಾರೆ. ಅಲೆನ್ ಕೆರಿಯರ್ ಸಂಸ್ಥೆಯ ಸಾಯಿ ನವನೀತ್ ಮುಕುಂದ್ 41 ಮತ್ತು ಅಮೋಘ್ ಅಗರ್ವಾಲ್ 47ನೇ ಸ್ಥಾನ ಪಡೆದಿದ್ದಾರೆ. ಕಸವನಹಳ್ಳಿ ನಾರಾಯಣ ಕಾಲೇಜಿನ ಅಮೋಘ್ ಅಗರ್ವಾಲ್ ಮೇನ್ಸ್-1ರಲ್ಲಿಯೂ ರಾಜ್ಯದ ಟಾಪರ್ ಆಗಿ ಹೊರಹೊಮ್ಮಿದ್ದರು. ಅಖಿಲ ಭಾರತ ಮಟ್ಟದಲ್ಲಿ 11ನೇ ರ‍್ಯಾಂಕ್ ಪಡೆದಿದ್ದರು.

ರಾಜ್ಯದ ಶ್ರೀ ಚೈತನ್ಯ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿದ ಅನಿಮೇಷ್ ಸಿಂಗ್ ರಾಥೋಡ್- 2, ಮನೋಜ್ ಸೋಹಾನ್ ಗಜುಲಾ- 96, ಅರಮಾನ್ ಸಿಂಘಾಲ್- 542, ಆಯುಷ್ ರೈ- 552, ಚಿರಾಗ್ ವಿ. ಗೌಡ- 572, ಜಗದೀಶ್ ಎಂ. ರೆಡ್ಡಿ-668, ರೋಹಿತ್ ರಾಜೀವ್ ನಂಬಿಯಾರ್- 696ನೇ ರ‍್ಯಾಂಕ್ ಪಡೆದಿದ್ದಾರೆ.

ಅಲೆನ್ ಕೆರಿಯರ್ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ಮೊದಲ 100 ಪರ್ಸಂಟೇಜ್‌ನಲ್ಲಿ ಇಬ್ಬರು ವಿದ್ಯಾರ್ಥಿಗಳು ಮತ್ತು 500ರಲ್ಲಿ 16 ವಿದ್ಯಾರ್ಥಿಗಳಿದ್ದಾರೆ. 1000-35, 2000-80, 5000-176 ವಿದ್ಯಾರ್ಥಿಗಳಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಅಲೆನ್ ದಕ್ಷಿಣ ವಿಭಾಗದ ಮುಖ್ಯಸ್ಥ ಮಹೇಶ್ ಯಾದವ್ ಅಭಿನಂದನೆ ಸಲ್ಲಿಸಿದ್ದಾರೆ.



ಶಾನ್ವಿ ಜೈನ್



ಸಾಯಿ ನವನೀತ್

ಜೆಇಇ ಮೇನ್ಸ್-2ರ ಪರೀಕ್ಷೆಯು ಏಪ್ರಿಲ್ 4ರಿಂದ 9ರವರೆಗೆ ನಡೆದಿತ್ತು. ಕನ್ನಡ, ಇಂಗ್ಲಿಷ್ ಸೇರಿ ದೇಶಾದ್ಯಂತ ವಿವಿಧ 13 ಭಾಷೆಗಳಲ್ಲಿ 319 ನಗರಗಳ 571 ಕೇಂದ್ರಗಳಲ್ಲಿ ಪರೀಕ್ಷೆ ನಡೆಸಲಾಗಿತ್ತು. ವಾಷಿಂಗ್ಟನ್ ಡಿಸಿ, ಅಬುಧಾಬಿ, ಕೇಪ್ ಟೌನ್ ಸೇರಿದಂತೆ ವಿದೇಶದ 21 ನಗರಗಳಲ್ಲಿಯೂ ಪರೀಕ್ಷೆ ನಡೆಸಲಾಗಿತ್ತು. ಆನ್‌ಲೈನ್ ಮೂಲಕ ಪರೀಕ್ಷೆ ನಡೆಸಿರುವುದರಿಂದ ಅಲ್ಲಿಂದಲೇ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.

3,73,515 ವಿದ್ಯಾರ್ಥಿನಿಯರು ಮತ್ತು 8,06,045 ವಿದ್ಯಾರ್ಥಿಗಳು, 9 ತೃತೀಯ ಲಿಂಗಿಗಳೂ ಸೇರಿ ಒಟ್ಟು 11,79,569 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಇದರಲ್ಲಿ 10,67,959 ಮಂದಿ ಹಾಜರಾಗಿದ್ದರು. ಮೇ 26ರಂದು ಜೆಇಇ ಅಡ್ವಾನ್ಸ್ಡ್ ಪರೀಕ್ಷೆ ನಡೆಯಲಿದೆ.

# ಸಿಡಿದ ಕಾರಿನ ಟೈರು ಶಾಸಕ ಕೃಷ್ಣಮೂರ್ತಿ ಪಾರು



**ಕೊಳ್ಳೇಗಾಲ (ಚಾ.ನಗರ):** ಶಾಸಕ ಎ.ಆರ್.ಕೃಷ್ಣಮೂರ್ತಿ ಚುನಾವಣಾ ಪ್ರಚಾರ ಮುಗಿಸಿ ಮೈಸೂರಿಗೆ ತೆರಳುತ್ತಿದ್ದ ವೇಳೆ ಟೈರ್ ಸಿಡಿದ ಪರಿಣಾಮ ಅವರ ಕಾರು ಹಳ್ಳಕ್ಕೆ ಬಿದ್ದಿದೆ. ಅದೃಷ್ಟವಶಾತ್ ಶಾಸಕ ಸೇರಿ ಕಾರಿನಲ್ಲಿದ್ದವರು ಅಪಾಯದಿಂದ ಪಾರಾಗಿದ್ದಾರೆ.

ಬುಧವಾರ ರಾತ್ರಿ ಮೈಸೂರಿನ ನಾಡನಹಳ್ಳಿ ಬಳಿ ಈ ಘಟನೆ ನಡೆದಿದೆ. ಕಾರಿನ ಚಾಲಕನಿಗೆ ಸಣ್ಣ ಗಾಯಗಳಾಗಿವೆ. ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಶಾಸಕ ಕೃಷ್ಣಮೂರ್ತಿ, ''ಕಾರಿನ ಟೈರ್ ಸಿಡಿದಿದ್ದರಿಂದ ವಾಹನ ಹಳ್ಳಕ್ಕೆ ಬಿದ್ದಿದೆ. ಎಲ್ಲರೂ ಅಪಾಯದಿಂದ ಪಾರಾಗಿದ್ದೇವೆ,'' ಎಂದರು.

# ಕಾಜಲ್ ಹಿಂದೂಸ್ತಾನಿಗೆ ರಿಲ್ಯಾಕ್ಸ್

■ **ವಿಕ ಸುದ್ದಿಲೋಕ** ಬೆಂಗಳೂರು

ಉಡುಪಿಯಲ್ಲಿ ಎರಡು ವರ್ಷಗಳ ಹಿಂದೆ ನಡೆದ 'ದುರ್ಗಾ ದೌಡ್' ಕಾರ್ಯಕ್ರಮದಲ್ಲಿ ಭಾಗವಹಿಸಿ ಕೋಮು ದ್ವೇಷ ಭಾಷಣ ಮಾಡುವ ಮೂಲಕ ಕೋಮು ಗಲಭೆಗೆ ಪ್ರಚೋದನೆ ನೀಡಿದ ಆರೋಪದ ಮೇರೆಗೆ ಹಿಂದೂ ಕಾರ್ಯಕರ್ತೆ ಕಾಜಲ್ ಹಿಂದೂಸ್ತಾನಿ ವಿರುದ್ಧ ದಾಖಲಾಗಿರುವ ಎಫ್‌ಐಆರ್‌ಗೆ ಹೈಕೋರ್ಟ್ ಗುರುವಾರ ಮಧ್ಯಂತರ ತಡೆ ನೀಡಿದೆ.

ಕಾಜಲ್ ಹಿಂದೂಸ್ತಾನಿ ಸಲ್ಲಿಸಿದ್ದ ಅರ್ಜಿ ಪರಿಶೀಲಿಸಿದ ನ್ಯಾ.ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ, ಮಧ್ಯಂತರ ತಡೆ ನೀಡಿ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಿ ವಿಚಾರಣೆ ಮುಂದೂಡಿತು.

ಅರ್ಜಿದಾರರ ಪರ ವಾದಿಸಿದ ಹಿರಿಯ ನ್ಯಾಯವಾದಿ ಅರುಣ್ ಶ್ಯಾಮ್, ''ಐಪಿಸಿ ಸೆಕ್ಷನ್ 505 ಕ್ಲಾಸ್ 2 ಅಡಿ ಜಿಲ್ಲಾಧಿಕಾರಿಗಳಿಂದ ಆರೋಪಿಯ ವಿಚಾರಣೆಗೆ ಪೂರ್ವಾನುಮತಿ ಪಡೆಯಲಾಗಿದೆ. ಆದರೆ, ಅವರ ಮುಂದೆ ಸಮರ್ಪಕ ದಾಖಲೆ ಮಂಡಿಸಿಲ್ಲ. ಜತೆಗೆ, ಮ್ಯಾಜಿಸ್ಟ್ರೇಟ್ ತಮ್ಮ ವಿವೇಚನೆ ಬಳಸದೆ ಕಾಗ್ನಿಜೆನ್ಸ್ ಪಡೆದು ವಿಚಾರಣೆ ಮುಂದುವರಿಸಿದ್ದಾರೆ. ಅಲ್ಲದೆ, ಈ ಪ್ರಕರಣದಲ್ಲಿ ಅರ್ಜಿದಾರರು ಉದ್ದೇಶಪೂರ್ವಕವಾಗಿಯೇ ಹೇಳಿಕೆ ನೀಡಿದ್ದಾರೆಂಬುದನ್ನು ಸಾಬೀತುಪಡಿಸಿಲ್ಲ,'' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

> **ಪ್ರಕರಣದ ಹಿನ್ನೆಲೆ**
>
> 2022ರ ಅಕ್ಟೋಬರ್ 2ರಂದು ಉಡುಪಿ ಕೃಷ್ಣಮಠದ ಪಾರ್ಕಿಂಗ್ ಜಾಗದ ಎದುರು ದುರ್ಗಾ ದೌಡ್ ಕಾರ್ಯಕ್ರಮದಲ್ಲಿ ಹಿಂದೂ ಜಾಗರಣಾ ವೇದಿಕೆಯ ಮುಖಂಡರಾದ ಶ್ರೀಕಾಂತ್ ಶೆಟ್ಟಿ ಹಾಗೂ ಕಾಜಲ್ ಹಿಂದೂಸ್ತಾನಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಆಗ ಕಾಜಲ್ ಅವರು ತಮ್ಮ ಭಾಷಣದಲ್ಲಿ ''ಹಿಂದೂ ಹೆಣ್ಣು ಮಕ್ಕಳನ್ನು ಮುಸ್ಲಿಂ ಸಮುದಾಯದವರು ಲವ್ ಜಿಹಾದ್ ನಡೆಸಿ ವಂಚಿಸುತ್ತಿದ್ದಾರೆ. ಹಾಗಾಗಿ, ಹಿಂದೂಗಳು ಮನೆಯಲ್ಲಿ ಮಾರಕಾಸ್ತ್ರಗಳನ್ನು ಇಟ್ಟುಕೊಂಡು ಪೂಜೆ ಮಾಡಿ ಅದನ್ನು ಬಳಸಬೇಕು,'' ಎಂದು ಹೇಳಿಕೆ ನೀಡುವ ಮೂಲಕ ಹಿಂದೂಗಳನ್ನು ಮುಸ್ಲಿಮರ ವಿರುದ್ಧ ಎತ್ತಿಕಟ್ಟಿ ದ್ವೇಷ ಭಾಷಣ ಮಾಡಿದ್ದಾರೆಂದು ಹುಸೇನ್ ಎಂಬುವರು ಉಡುಪಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಅದರ ಮೇಲೆ ಉಡುಪಿ ಟೌನ್ ಪೊಲೀಸರು ಎಫ್‌ಐಆರ್ ಸಲ್ಲಿಸಿದ್ದರು. ಅದನ್ನು ರದ್ದುಗೊಳಿಸಲು ಕೋರಿ ಕಾಜಲ್ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

# ಆಕ್ಷೇಪಾರ್ಹ ಹೇಳಿಕೆ: ನಟಿ ಶ್ರುತಿಗೆ ನೋಟಿಸ್

■ **ವಿಕ ಸುದ್ದಿಲೋಕ** ಬೆಂಗಳೂರು

ಲೋಕಸಭಾ ಚುನಾವಣಾ ಪ್ರಚಾರದ ವೇಳೆ ಮಹಿಳೆಯರ ವಿಚಾರವಾಗಿ ಆಕ್ಷೇಪಾರ್ಹ ಹೇಳಿಕೆ ನೀಡಿದ್ದ ನಟಿ ಶ್ರುತಿ ಅವರಿಗೆ ರಾಜ್ಯ ಮಹಿಳಾ ಆಯೋಗ ನೋಟಿಸ್ ಜಾರಿ ಮಾಡಿದ್ದು, ಏಳು ದಿನದೊಳಗೆ ಸ್ಪಷ್ಟನೆ ನೀಡುವಂತೆ ಸೂಚಿಸಿದೆ.



ಶ್ರುತಿ ಅವರು ಇತ್ತೀಚೆಗೆ ಉಡುಪಿಯಲ್ಲಿ ಬಿಜೆಪಿ ಅಭ್ಯರ್ಥಿ ಪರ ಚುನಾವಣಾ ಪ್ರಚಾರ ನಡೆಸುತ್ತಿದ್ದ ವೇಳೆ, ''ರಾಜ್ಯ ಸರಕಾರದ ಗ್ಯಾರಂಟಿ ಯೋಜನೆಗಳು ಹಾಗೂ ಉಚಿತ ಬಸ್ ಸೇವೆಯ 'ಶಕ್ತಿ' ಯೋಜನೆಯಿಂದ ಹೆಣ್ಣು ಮಕ್ಕಳು ತೀರ್ಥಯಾತ್ರೆಗೆ ಹೋಗುತ್ತೇವೆ ಎಂದು ಹೇಳಿ ಎಲ್ಲೆಲ್ಲೋ ಹೋಗುತ್ತಿದ್ದಾರೆ,'' ಎಂದು ಆಕ್ಷೇಪಾರ್ಹ ಹೇಳಿಕೆ ನೀಡಿದ್ದರು. ಈ ಸಂಬಂಧ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್ ಅವರು ಶ್ರುತಿ ವಿರುದ್ಧ ರಾಜ್ಯ ಮಹಿಳಾ ಆಯೋಗಕ್ಕೆ ದೂರು ಕೊಟ್ಟಿದ್ದರು.

ಈ ದೂರು ಆಧರಿಸಿ ರಾಜ್ಯ ಮಹಿಳಾ ಆಯೋಗ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಅವರು ಶ್ರುತಿ ಅವರಿಗೆ ನೋಟಿಸ್ ಜಾರಿ ಮಾಡಿದ್ದಾರೆ. ಅಲ್ಲದೆ, ನೋಟಿಸ್ ತಲುಪಿದ ಏಳು ದಿನದೊಳಗೆ ತಮ್ಮ ಹೇಳಿಕೆ ಸಂಬಂಧ ಸ್ಪಷ್ಟೀಕರಣ ನೀಡುವಂತೆ ಸೂಚಿಸಿದ್ದಾರೆ. ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ಪತ್ರ ಬರೆದಿರುವ ನಾಗಲಕ್ಷ್ಮೀ ಚೌಧರಿ, ಮಹಿಳೆಯರನ್ನು ಅನುಮಾನಿಸುವ ಮತ್ತು ಅವಮಾನಿಸುವ ರೀತಿಯಲ್ಲಿ ಹೇಳಿಕೆ ಕೊಟ್ಟಿರುವ ಶ್ರುತಿ ರುದ್ಧ ಕಾನೂನು ಕ್ರಮ ಜರುಗಿಸುವಂತೆ ಮನವಿ ಮಾಡಿದ್ದಾರೆ.

# ನೋಂದಾಯಿಸಿದ ವಿಷಯದ ಪರೀಕ್ಷೆಗೆ ಮಾತ್ರ ಹಾಜರಾಗಿ

## ಹಾಲ್ ಟಿಕೆಟ್‌ನಲ್ಲಿ ಹೆಚ್ಚುವರಿ ವಿಷಯ ಮುದ್ರಣಕ್ಕೆ ಮಂಡಳಿ ಸ್ಪಷ್ಟನೆ

■ **ವಿಕ ಸುದ್ದಿಲೋಕ** ಬೆಂಗಳೂರು

ದ್ವಿತೀಯ ಪಿಯು ಪರೀಕ್ಷೆ-2ರ ಪ್ರವೇಶ ಪತ್ರದಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಂಡಿರುವ ವಿಷಯದ ಜತೆಗೆ ಹೆಚ್ಚುವರಿ ವಿಷಯಗಳು ಮುದ್ರಣಗೊಂಡಿರುವುದರಿಂದ ವಿದ್ಯಾರ್ಥಿಗಳು ಗಾಬರಿಯಾಗದಂತೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಮನವಿ ಮಾಡಿದೆ.

ಒಂದು ವಿಷಯದ ಜತೆಗೆ ಹೆಚ್ಚುವರಿ ವಿಷಯಗಳು ಮುದ್ರಣಗೊಂಡಿರುವುದು ಮಂಡಳಿ ಗಮನಕ್ಕೆ ಬಂದಿದೆ. ಅಂತಹ ವಿದ್ಯಾರ್ಥಿಗಳು ಯಾವುದೇ ಗೊಂದಲಕ್ಕೆ ಒಳಗಾಗದಂತೆ ಪರೀಕ್ಷೆಗೆ ನೋಂದಾಯಿಸಿಕೊಂಡಿರುವ ವಿಷಯಗಳಿಗೆ ಮಾತ್ರ ಹಾಜರಾಗುವಂತೆ ಮನವಿ ಮಾಡಿದೆ.

> **ಪರೀಕ್ಷಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪ್ರಯಾಣ**
>
> **ಬೆಂಗಳೂರು:** ದ್ವಿತೀಯ ಪಿಯು ಪರೀಕ್ಷೆ-2ಕ್ಕೆ ಹಾಜರಾಗುವ ವಿದ್ಯಾರ್ಥಿಗಳಿಗೆ ನಿಗಮದ ಬಸ್‌ಗಳಲ್ಲಿ ಪರೀಕ್ಷಾ ದಿನಗಳಂದು ಉಚಿತವಾಗಿ ಪ್ರಯಾಣಿಸಲು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ) ಅವಕಾಶ ಕಲ್ಪಿಸಿವೆ. ಪರೀಕ್ಷೆಗಳು ಏ.29ರಿಂದ ಆರಂಭವಾಗಲಿದ್ದು, ವಿದ್ಯಾರ್ಥಿಗಳಿಗೆ ಅವರ ವಿದ್ಯಾಸಂಸ್ಥೆಯ ಹೊರತಾಗಿ ಇತರೆ ವಿದ್ಯಾಸಂಸ್ಥೆಗಳ ಪರೀಕ್ಷಾ ಕೇಂದ್ರಗಳು ನಿಯೋಜನೆಯಾಗಿರುವುದರಿಂದ ಪರೀಕ್ಷಾ ಅವಧಿಯಲ್ಲಿ ವಿದ್ಯಾರ್ಥಿಗಳ ವಾಸ ಸ್ಥಳದಿಂದ ಪರೀಕ್ಷಾ ಕೇಂದ್ರಗಳವರೆಗೆ ನಿಗಮದ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಲು ನಿಗಮ ಅನುಮತಿ ನೀಡಿದೆ. ವಿದ್ಯಾರ್ಥಿಗಳು ಪ್ರವೇಶ ಪತ್ರ ತೋರಿಸುವ ಮೂಲಕ ಉಚಿತವಾಗಿ ಪ್ರಯಾಣಿಸಬಹುದಾಗಿದೆ. ಅಲ್ಲದೆ, ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಮಾರ್ಗಗಳಲ್ಲಿ ಕೋರಿಕೆ ನಿಲುಗಡೆಗೆ ಕ್ರಮಕೈಗೊಳ್ಳುವಂತೆ ನಿಗಮವು ಚಾಲಕರಿಗೆ ಸೂಚಿಸಿದೆ.

**ಮಹಾರಾಷ್ಟ್ರ ನ್ಯಾಚುರಲ್ ಗ್ಯಾಸ್ ಲಿಮಿಟೆಡ್**
(ಗೇಲ್ & ಬಿಪಿಸಿಎಲ್ ಜಾಯಿಂಟ್ ವೆಂಚರ್)

**ಡಿ-ಕಾಂಪ್ರೆಷನ್ ಸ್ಕಿಡ್ (ಡಿಸಿಎಸ್) ಸೌಕರ್ಯ ಸ್ಥಾಪನೆಗಾಗಿ ರಾಮನಗರ ಜಿಲ್ಲೆಯ ರಾಮನಗರ, ಕನಕಪುರ ಮತ್ತು ಮಾಗಡಿ ಪ್ರದೇಶಗಳಲ್ಲಿ ದೀರ್ಘಾವಧಿ ಭೋಗ್ಯದ / ಲೀಸ್ ಆಧಾರದಲ್ಲಿ ಆಫರ್ ಅರ್ಜಿ ಆಹ್ವಾನ ಪ್ರಕಟಣೆ.**

ಎಂಎನ್‌ಜಿಎಲ್ ಸಂಸ್ಥೆಗೆ ರಾಮನಗರ, ಕನಕಪುರ ಮತ್ತು ಮಾಗಡಿ ಪ್ರದೇಶಗಳಲ್ಲಿ ಸಿಟಿ ಗ್ಯಾಸ್ ಡಿಸ್ಟ್ರಿಬ್ಯೂಷನ್ ಪ್ರಾಜೆಕ್ಟ್‌ಗಾಗಿ ದೀರ್ಘಾವಧಿ ಭೋಗ್ಯದ ಆಧಾರದಲ್ಲಿ (ಕನಿಷ್ಠ 5 ವರ್ಷ) ಸೂಕ್ತ ಜಮೀನು ಬೇಕಾಗಿರುತ್ತದೆ. ರಾಮನಗರ ಜಿಲ್ಲೆಯ ರಾಮನಗರ, ಕನಕಪುರ ಮತ್ತು ಮಾಗಡಿ ಪ್ರದೇಶಗಳಲ್ಲಿ ಸುಮಾರು 250 ಚ.ಮೀ.-360 ಚ.ಮೀ. (ಕನಿಷ್ಠ 10 ಮೀ. ಫ್ರಂಟೇಜ್ ಹೊಂದಿರುವ) ಸೂಕ್ತ ನಿವೇಶನಗಳಿಗೆ ಆದ್ಯತೆ ನೀಡಲಾಗುತ್ತದೆ.

ಸಂಪೂರ್ಣ ವಿವರಗಳಿಗಾಗಿ ಮತ್ತು ನಿಗದಿತ ಸಮಯದೊಳಗೆ ಅರ್ಜಿ ಸಲ್ಲಿಸಲು, ಆಸಕ್ತಿಯುಳ್ಳ ಅರ್ಜಿದಾರರು ನಮ್ಮ **www.mngl.in** ವೆಬ್‌ಸೈಟ್‌ಗೆ ಭೇಟಿ ನೀಡಬಹುದು ಅಥವಾ ಈ ಕೆಳಗಿನವರನ್ನು ಸಂಪರ್ಕಿಸಬಹುದು:

**ದಿನೇಶಕುಮಾರ್ ಶರ್ಮಾ** - +91 8999807684
**ಸುರೇಂದ್ರನ್** - +91 9591032409
**ಭರತೇಂದ್ರ ಸಿಂಗ್** - +91 9687641692
**ರಾಮ್ ಅಂಬ್ರೆ** - +91 9637961193

ಯಾವುದೇ ಸ್ಪಷ್ಟೀಕರಣ/ತಿದ್ದುಪಡಿ/ಮಾರ್ಪಾಡುಗಳು ಎದುರಾದಲ್ಲಿ, ಅಂತಹವುಗಳನ್ನು ಮೇಲ್ಕಂಡ ನಮ್ಮ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

**ಪ್ರಸ್ತಾವಣೆಗಳನ್ನು ಸಲ್ಲಿಸಬೇಕಾದ ವಿಳಾಸ:**
ಮಹಾರಾಷ್ಟ್ರ ನ್ಯಾಚುರಲ್ ಗ್ಯಾಸ್ ಲಿಮಿಟೆಡ್
ಬಾಷ್ ಗೇಟ್ ನಂ. 1 ಎದುರು, ಪ್ಲಾಟ್ ನಂ.: ವೆಹಿಕಲ್ ಪಾರ್ಕಿಂಗ್ 1, ಕೆಐಎಡಿಬಿ, 2ನೇ ಹಂತ,
ಸೆಕ್ಟರ್-2 ಬಿಡದಿ ಕೈಗಾರಿಕಾ ಪ್ರದೇಶ, ತಾಲ್ಲೂಕು & ಜಿಲ್ಲೆ: ರಾಮನಗರ, ಕರ್ನಾಟಕ-562109

ಎಂಎನ್‌ಜಿಎಲ್ ಸಂಸ್ಥೆಯು ಯಾವುದೇ ಪ್ರಸ್ತಾವಣೆಯನ್ನು ಯಾವುದೇ ಕಾರಣ ನೀಡದೆಯೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

**ಸೂಚನೆ:- ಈ ಜಾಹೀರಾತು ಪ್ರಕಟಗೊಂಡ ದಿನಾಂಕದಿಂದ 21 ದಿನಗಳೊಳಗೆ ಮೊಹರಾದ ಲಕೋಟೆಯಲ್ಲಿ ನಿಮ್ಮ ಪ್ರಸ್ತಾವಣೆಗಳನ್ನು ಸಲ್ಲಿಸುವುದು.**

**ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ**
ಆಯುಕ್ತರ ಕಛೇರಿ, ಕೌಶಲ್ಯ ಭವನ, ಡೈರಿ ವೃತ್ತ, ಬನ್ನೇರುಘಟ್ಟ ರಸ್ತೆ,
ಬೆಂಗಳೂರು - 560029 ದೂರವಾಣಿ: 080 - 25189125
ಇ-ಮೇಲ್: ddpurchase2016@gmail.com

ಸಂಖ್ಯೆ:ಕೈತಉ/ತರಬೇತಿ/ಖರೀದಿ-03/ವಿವ-01/2024-25 ದಿನಾಂಕ: 24-04-2024

**ಅಲ್ಪಾವಧಿ ಟೆಂಡರ್ ಪ್ರಕಟಣೆ** (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ಆಡಳಿತ ಕಛೇರಿಗಳಿಗೆ ಅಗತ್ಯವಿರುವ ಕಂಪ್ಯೂಟರ್ ಹಾಗೂ ಇತರೆ ಪರಿಕರಗಳನ್ನು ಕೇಂದ್ರ ಪುರಸ್ಕೃತ ಯೋಜನೆ - STRIVE ಪ್ರಾಜೆಕ್ಟ್ ಅಡಿಯಲ್ಲಿ ಖರೀದಿಸಲು ಅರ್ಹ ಟೆಂಡರ್‌ದಾರರಿಂದ ಎರಡು ಎಲೆಕ್ಟ್ರಾನಿಕ್ ಟೆಂಡರ್ ಡಾಕ್ಯೂಮೆಂಟ್ ವ್ಯವಸ್ಥೆಯಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರ ಅನ್ವಯ ಇ-ಪ್ರೊಕ್ಯೂರ್‌ಮೆಂಟ್ 2.0 ಮೂಲಕ 10 ದಿನಗಳ ಅವಧಿಗೆ ಅಲ್ಪಾವಧಿ ಟೆಂಡರ್ ಅಹ್ವಾನಿಸಲಾಗಿದೆ. ಟೆಂಡರ್ ಡಾಕ್ಯೂಮೆಂಟ್‌ನ್ನು ಇ-ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡುವ ದಿನಾಂಕ: 25-04-2024 ರಿಂದ ಹಾಗೂ ತಾಂತ್ರಿಕ ದಾಖಲೆಗಳೊಂದಿಗೆ ಟೆಂಡರ್ ಅನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 04-05-2024 ರಂದು ಸಂಜೆ 5.00 ಗಂಟೆಗೆ.

ಟೆಂಡರ್ ದಾಖಲೆ ಮತ್ತು ಟೆಂಡರ್ Processing Fee ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸರ್ಕಾರಿ ವೆಬ್‌ಸೈಟ್: https://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು. ಸಹಾಯಕ್ಕಾಗಿ ದೂರವಾಣಿ ಸಂಖ್ಯೆ: 080-25501216 / 25501227 ಅಥವಾ ಈ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಟೆಂಡರ್ ಆಹ್ವಾನಿಸುವ ಪ್ರಾಧಿಕಾರ,
ಕೈಗಾರಿಕಾ ತರಬೇತಿ ಮತ್ತು ಉದ್ಯೋಗ.

ವಾಸಾಸಂಇ/ವಾ.ಪ್ರ/40/ಅಡ್ವರ್ಟೋರ್/2024-25

ಚುನಾವಣಾ ಆಯೋಗದ ಅನುಮತಿ ಪತ್ರ
ಸಂಖ್ಯೆ: 437/KT-HP/2024, ದಿನಾಂಕ: 17-04-2024

# ಶಿಕ್ಷಕರ ವರ್ಗಾವಣೆಗೆ ಆರಂಭದಲ್ಲೇ ವಿಘ್ನ

» ಮೊದಲ ಪುಟದಿಂದ

**ವರ್ಗಾವಣೆ ಪ್ರಕ್ರಿಯೆಗೆ ಹಿನ್ನಡೆ:** ಶಿಕ್ಷಣ ಇಲಾಖೆಯು ವರ್ಗಾವಣೆಯನ್ನು ತಡ ಮಾಡಬಾರದೆಂಬ ಕಾರಣಕ್ಕೆ ನೀತಿ ಸಂಹಿತೆ ಜಾರಿಗೆ ತರುವ ಮುನ್ನವೇ ಶಿಕ್ಷಣ ಇಲಾಖೆ ಅಧಿಸೂಚನೆ ಹೊರಡಿಸಿತ್ತು. 2023ರ ಹೊಸ ನಿಯಮ ರೂಪಿಸುವ ಬದಲು 2022ರ ನಿಯಮವನ್ನೇ ಅನುಸರಿಸಿ ವರ್ಗಾವಣೆ ಮಾಡಲು ಅಧಿಸೂಚನೆ ಮತ್ತು ಮಾರ್ಗಸೂಚಿಗಳನ್ನು ಮಾರ್ಚ್‌ನಲ್ಲೇ ಹೊರಡಿಸಿತ್ತು. ಆ ಪ್ರಕಾರವಾಗಿ ಶಿಕ್ಷಕರಿಂದ ಅರ್ಜಿ ಆಹ್ವಾನಿಸುತ್ತಿದೆ. ಮೇ 15ರವರೆಗೆ ಶಿಕ್ಷಕರ ವರ್ಗಾವಣೆಗೆ ಅರ್ಜಿ ಸಲ್ಲಿಕೆಗೆ ಅವಕಾಶವಿದ್ದು, ಆನಂತರ ಅಂತಿಮ ಅರ್ಹತಾ ಪಟ್ಟಿ ಬಿಡುಗಡೆ ಮಾಡಲಿದೆ. ಜೂನ್ ಮೊದಲ ವಾರದವರೆಗೆ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಇದಾದ ಬಳಿಕ ಕೌನ್ಸೆಲಿಂಗ್ ನಡೆಸಲು ಶಿಕ್ಷಣ ಇಲಾಖೆ ನಿರ್ಧರಿಸಿತ್ತು.

ಈ ಮಧ್ಯೆ, ಕೆಎಟಿ ತಡೆಯಾಜ್ಞೆ ನೀಡಿರುವುದರಿಂದ ಇದನ್ನು ಉಲ್ಲಂಘಿಸಿ ಜೇಷ್ಠತಾ ಪಟ್ಟಿಯನ್ನು ರಚಿಸುವಂತಿಲ್ಲ. ಇದು ಇತ್ಯರ್ಥವಾಗದೇ ಅಂತಿಮ ಪಟ್ಟಿಯನ್ನು ಬಿಡುಗಡೆ ಮಾಡುವುದಕ್ಕೆ ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ ಶಿಕ್ಷಣ ಇಲಾಖೆ ಸಿಲುಕಿದೆ.

# ಮತಾಪು ಬೆಳಗುವ ಸಮಯ

» ಮೊದಲ ಪುಟದಿಂದ

**ಕಣದಲ್ಲಿರುವ ಪ್ರಮುಖರು:** ಮಂಡ್ಯದಲ್ಲಿ ಮಾಜಿ ಸಿಎಂ ಕುಮಾರಸ್ವಾಮಿ, ಚಿತ್ರದುರ್ಗ ಎಸ್ಸಿ ಮೀಸಲು ಕ್ಷೇತ್ರದಿಂದ ಮಾಜಿ ಡಿಸಿಎಂ ಗೋವಿಂದ ಕಾರಜೋಳ, ಬೆಂಗಳೂರು ಉತ್ತರದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಮೈಸೂರಿನಲ್ಲಿ ರಾಜವಂಶಸ್ಥ ಯದುವೀರ್ ಒಡೆಯರ್, ಮಾಜಿ ಸಚಿವರಾದ ವಿ.ಸೋಮಣ್ಣ (ತುಮಕೂರು), ಡಾ.ಕೆ.ಸುಧಾಕರ್ (ಚಿಕ್ಕಬಳ್ಳಾಪುರ), ಉಡುಪಿ-ಚಿಕ್ಕಮಗಳೂರಿನಿಂದ ಕೋಟ ಶ್ರೀನಿವಾಸ ಪೂಜಾರಿ, ಜಯಪ್ರಕಾಶ್ ಹೆಗ್ಡೆ ಒಳಗೊಂಡು ಹಲವು ಪ್ರಮುಖರು ಚುನಾವಣಾ ಕಣದಲ್ಲಿದ್ದಾರೆ.

**ಹಾಲಿ ಸಂಸದರು:** ಬೆಂಗಳೂರು ದಕ್ಷಿಣದಿಂದ ತೇಜಸ್ವಿ ಸೂರ್ಯ, ಬೆಂಗಳೂರು ಸೆಂಟ್ರಲ್‌ನಿಂದ ಪಿ.ಸಿ.ಮೋಹನ್, ಹಾಸನದಲ್ಲಿ ಪ್ರಜ್ವಲ್ ರೇವಣ್ಣ, ಬೆಂಗಳೂರು ಗ್ರಾಮಾಂತರದಲ್ಲಿ ಡಿ.ಕೆ.ಸುರೇಶ್ ಹಾಲಿ ಸಂಸದರಾಗಿದ್ದು, ಮರುಆಯ್ಕೆ ಬಯಸಿ ಚುನಾವಣಾ ಕಣದಲ್ಲಿದ್ದಾರೆ.

**ಮೊದಲ ಅಗ್ನಿಪರೀಕ್ಷೆ:** ವೈದ್ಯಕೀಯ ಕ್ಷೇತ್ರದಲ್ಲಿ ಸುದೀರ್ಘ ಸೇವೆ ಬಳಿಕ ಸಾರ್ವಜನಿಕ ಬದುಕಿಗೆ ಪ್ರವೇಶಿಸಿರುವ ಡಾ. ಸಿ.ಎನ್. ಮಂಜುನಾಥ್ ಅವರಿಗೆ ಇದು ಮೊದಲ ಅಗ್ನಿಪರೀಕ್ಷೆಯಾಗಿದೆ.

ಅಂತೆಯೇ ಮೈಸೂರು ರಾಜವಂಶಸ್ಥ ಯದುವೀರ್ ಒಡೆಯರ್, ಚಾಮರಾಜನಗರ ಎಸ್ಸಿ ಮೀಸಲು ಕ್ಷೇತ್ರದಲ್ಲಿ ಸುನೀಲ್ ಬೋಸ್, ಕೋಲಾರದಲ್ಲಿ ಕೆ.ವಿ.ಗೌತಮ್, ಬೆಂಗಳೂರು ಸೆಂಟ್ರಲ್‌ನ ಮನ್ಸೂರ್ ಅಲಿಖಾನ್, ಚಿಕ್ಕಬಳ್ಳಾಪುರ ಕ್ಷೇತ್ರದಿಂದ ರಕ್ಷಾ ರಾಮಯ್ಯ, ಮಂಡ್ಯದಲ್ಲಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು ಮೊದಲ ಬಾರಿಗೆ ಚುನಾವಣೆ ಎದುರಿಸುತ್ತಿದ್ದಾರೆ.

# ಎಲ್ಲ ಆರೋಪಿಗಳ ಬಂಧನಕ್ಕೆ ಮುನವಳ್ಳಿ ಸಂತ್ರಸ್ತೆ ಒತ್ತಾಯ

**ಬೆಳಗಾವಿ:** ತಮ್ಮ ಮೇಲೆ ದೌರ್ಜನ್ಯ ಎಸಗಿ ಮತಾಂತರಕ್ಕೆ ಯತ್ನಿಸಿದ ಆರೋಪಿಗಳಲ್ಲಿ ಪೊಲೀಸರು ಇಬ್ಬರನ್ನು ಮಾತ್ರ ಬಂಧಿಸಿದ್ದು ಇನ್ನುಳಿದ ಐವರು ಆರೋಪಿಗಳನ್ನೂ ಬಂಧಿಸಬೇಕು ಎಂದು ಮುನವಳ್ಳಿಯ ಸಂತ್ರಸ್ತೆ ಒತ್ತಾಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ''ಪ್ರಕರಣ ಕುರಿತು 7 ಜನರ ವಿರುದ್ಧ ದೂರು ದಾಖಲಿಸಿದ್ದೇನೆ. ನನಗೆ ಜೀವ ಬೆದರಿಕೆ ಇದೆ, ಹಾಗಾಗಿ ರಕ್ಷಣೆ ನೀಡಬೇಕು,'' ಎಂದರು. ವಕೀಲರಾದ ಜಯಶ್ರೀ ಮಂಡ್ರೋಳಿ ಮಾತನಾಡಿ, ''ರಾಜ್ಯದಲ್ಲಿ ಹಿಂದೂ ಹೆಣ್ಣು ಮಕ್ಕಳನ್ನು ಗುರಿಯಾಗಿಟ್ಟುಕೊಂಡು ಅನ್ಯ ಕೋಮಿನವರು ಮತಾಂತರ ಮಾಡಲು ನಿರಂತರ ಪ್ರಯತ್ನಿಸುತ್ತಿದ್ದಾರೆ. ಇದರಿಂದ ನಮ್ಮ ಹಿಂದೂ ಹೆಣ್ಣು ಮಕ್ಕಳಿಗೆ ರಕ್ಷಣೆ ಇಲ್ಲದಂತಾಗಿದೆ. ಸರಕಾರ ಎಚ್ಚೆತ್ತುಕೊಂಡು ಕಟ್ಟುನಿಟ್ಟಿನ ಕಾನೂನು ಜಾರಿಗೊಳಿಸಬೇಕು,'' ಎಂದು ಒತ್ತಾಯಿಸಿದರು.

भारतीय रिज़र्व बैंक
पर्यवेक्षण विभाग
बेंगलूरु

प्रेस विज्ञप्ति

**बैंककारी विनियमन अधिनियम, 1949 (सहकारी समितियों पर यथालागू) की धारा 56 के साथ पठित धारा 35ए के अंतर्गत निदेश – दि नेशनल को-ऑपरेटिव बैंक लिमिटेड, बंगलौर- अवधि बढ़ाया जाना।**

भारतीय रिज़र्व बैंक ने बैंकिंग विनियमन अधिनियम, 1949 की धारा 56 के साथ पठित धारा 35ए के अंतर्गत दिनांक 24 जुलाई 2023 के, समय-समय पर यथासंशोधित, निदेश बीएलआर.डीओएस. एसएसएमएस.संख्या.एस836/09-01-112/2023-24 द्वारा दि नेशनल को-ऑपरेटिव बैंक लिमिटेड, बंगलौर को 24 जनवरी 2024 को कारोबार बंद होने तक छह महीने की अवधि के लिए निदेश जारी किया था, जिसे पिछली बार निदेश डीओआर. एमओएन/डी- 116/12-23-112/2023-2024 दिनांक 18 जनवरी 2024 द्वारा बढ़ाकर दिनांक 24 अप्रैल 2024 को कारोबार बंद होने तक के लिए लागू किया गया था। भारतीय रिज़र्व बैंक इस बात से संतुष्ट है कि जनहित में निदेश के लागू रहने की अवधि को 24 अप्रैल 2024 से आगे बढ़ाना आवश्यक है।

2. तदनुसार, भारतीय रिज़र्व बैंक, बैंकिंग विनियमन अधिनियम, 1949 की धारा 56 के साथ पठित धारा 35ए की उप-धारा (1) के तहत इसको निहित शक्तियों का प्रयोग करते हुए, इस निदेश को 24 अप्रैल 2024 को कारोबार की समाप्ति से 24 जुलाई 2024 को कारोबार की समाप्ति तक अगले तीन महीने की अवधि के लिए बढ़ा रहा है, जो समीक्षा के अधीन रहेगा।

3. संदभार्धीन निदेश के अन्य नियम एवं शर्तें यथावत रहेंगी।

बेंगलूरु
दिनांक : 26 अप्रैल 2024 क्षेत्रीय निदेशक

**ಮೇಲ್ವಿಚಾರಣಾ ಇಲಾಖೆ**
**ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ**
**ಬೆಂಗಳೂರು**

**ಪತ್ರಿಕಾ ಪ್ರಕಟಣೆ**

**ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 (ಸಹಕಾರ ಸಂಘಗಳಿಗೆ ಅನ್ವಯವಾಗುವಂತೆ)ರ ಪ್ರಕರಣ 35 ಎ ಮತ್ತು ಪ್ರಕರಣ 56 ರ ಅಡಿಯಲ್ಲಿನ ನಿರ್ದೇಶನಗಳು - ದಿ ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು - ಅವಧಿಯ ವಿಸ್ತರಣೆ**

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 ರ ಪ್ರಕರಣ 35 ಎ ಮತ್ತು ಪ್ರಕರಣ 56ರ ಅಡಿಯಲ್ಲಿ ದಿ ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು ಇವರಿಗೆ ನಿರ್ದೇಶನ ಸಂಖ್ಯೆ **BLR. DOS. SSMS. No. S836/09-01-112/2023-2024** ದಿನಾಂಕ ಜುಲೈ **24, 2023**ರಂತೆ ಆರು ತಿಂಗಳ ಅವಧಿಯವರೆಗೆ ಅಂದರೆ ಜನವರಿ **24, 2024**ರ ವ್ಯವಹಾರ ದಿನದ ಅಂತ್ಯದವರೆಗೆ ಅನ್ವಯಿಸುವ ನಿರ್ದೇಶನಗಳನ್ನು ನೀಡಿತ್ತು. ಇವುಗಳನ್ನು ನಿರ್ದೇಶನ ಸಂಖ್ಯೆ **DOR. MON/D-116/12-23-112/2023-2024**ರಂತೆ ದಿನಾಂಕ ಜನವರಿ **18, 2024**ರ ವ್ಯವಹಾರ ದಿನದ ಅಂತ್ಯದವರೆಗೆ ವಿಸ್ತರಿಸುವಂತೆ ಕಾಲ ಕಾಲಕ್ಕೆ ತಕ್ಕಂತೆ ಮಾರ್ಪಾಡು ಮಾಡಿತ್ತು. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ, ಸಾರ್ವಜನಿಕ ಹಿತವನ್ನು ಗಮನದಲ್ಲಿರಿಸಿಕೊಂಡು ನಿರ್ದೇಶನದ ಕಾರ್ಯಾಚರಣೆಯ ಅವಧಿಯನ್ನು ಏಪ್ರಿಲ್ **24, 2024**ರ ವ್ಯವಹಾರ ದಿನದ ಅಂತ್ಯಕ್ಕೂ ಮೀರಿ ವಿಸ್ತರಿಸುವ ಅಗತ್ಯವಿದೆ ಎಂಬುದನ್ನು ಮನಗಂಡಿದೆ.

**2.** ಅದರಂತೆ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ **1949**ರ ಪ್ರಕರಣ **35** ಎ ನ ಉಪ ಪ್ರಕರಣ **(1)** ಮತ್ತು ಪ್ರಕರಣ **56** ರ ಅಡಿಯಲ್ಲಿ ತನಗೆ ಇರುವ ಅಧಿಕಾರವನ್ನು ಬಳಸಿ ಈ ಮೂಲಕ ನಿರ್ದೇಶನವನ್ನು ಏಪ್ರಿಲ್ **24,2024**ರ ವ್ಯವಹಾರ ದಿನದ ಅಂತ್ಯದಿಂದ ಜುಲೈ **24,2024**ರ ವ್ಯವಹಾರ ದಿನದ ಅಂತ್ಯದವರೆಗಿನ ಮೂರು ತಿಂಗಳುಗಳವರೆಗೆ ಮರು ಪರಿಶೀಲನೆಗೆ ಒಳಪಟ್ಟು ವಿಸ್ತರಿಸಿದೆ.

**3.** ಈ ನಿರ್ದೇಶನಕ್ಕೆ ಸಂಬಂಧಿಸಿದ ಉಳಿದ ಎಲ್ಲಾ ಷರತ್ತುಗಳು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಬೆಂಗಳೂರು
ದಿನಾಂಕ : ಏಪ್ರಿಲ್ 26, 2024 ಪ್ರಾದೇಶಿಕ ನಿರ್ದೇಶಕರು

**WENDT**
**ವೆಂಡ್ಟ್ (ಇಂಡಿಯಾ) ಲಿಮಿಟೆಡ್**
CIN No: L85110KA1980PLC003913
ನೋಂದಾಯಿತ ಕಚೇರಿ: 105, 1ನೇ ಮಹಡಿ, ಕಾವೇರಿ ಬ್ಲಾಕ್, ನ್ಯಾಷನಲ್ ಗೇಮ್ಸ್ ಹೌಸಿಂಗ್ ಕಾಂಪ್ಲೆಕ್ಸ್, ಕೋರಮಂಗಲ, ಬೆಂಗಳೂರು-560 047

**31ನೇ ಮಾರ್ಚ್, 2024ರ ತ್ರೈಮಾಸಿಕ ಮತ್ತು ವರ್ಷಕ್ಕೆ ಕೊನೆಗೊಂಡ ಪ್ರತ್ಯೇಕ ಮತ್ತು ಕ್ರೋಢೀಕೃತ ಪರಿಶೋಧಿಸಿದ ವಿತ್ತೀಯ ಫಲಿತಾಂಶಗಳ ಸಾರಾಂಶ**

(ರೂ. ಲಕ್ಷಗಳಲ್ಲಿ, ಇಪಿಎಸ್ ಹೊರತುಪಡಿಸಿ)

| ಕ್ರ. ಸಂ. | ವಿವರ | ಪ್ರತ್ಯೇಕ ವಿತ್ತೀಯ ಫಲಿತಾಂಶ | | | | ಕ್ರೋಢೀಕೃತ ವಿತ್ತೀಯ ಫಲಿತಾಂಶ | | | |
|---|---|---|---|---|---|---|---|---|---|
| | | ಕೊನೆಗೊಂಡ ತ್ರೈಮಾಸಿಕ 31.03.2024 | ಕೊನೆಗೊಂಡ ತ್ರೈಮಾಸಿಕ 31.03.2023 | ಕೊನೆಗೊಂಡ ವಾರ್ಷಿಕ 31.03.2024 | ಕೊನೆಗೊಂಡ ವಾರ್ಷಿಕ 31.03.2023 | ಕೊನೆಗೊಂಡ ತ್ರೈಮಾಸಿಕ 31.03.2024 | ಕೊನೆಗೊಂಡ ತ್ರೈಮಾಸಿಕ 31.03.2023 | ಕೊನೆಗೊಂಡ ವಾರ್ಷಿಕ 31.03.2024 | ಕೊನೆಗೊಂಡ ವಾರ್ಷಿಕ 31.03.2023 |
| | | ಸೂಚನೆ 2 ಉಲ್ಲೇಖ | ಸೂಚನೆ 2 ಉಲ್ಲೇಖ | ಪರಿಶೋಧಿಸಿದ | ಪರಿಶೋಧಿಸಿದ | ಸೂಚನೆ 2 ಉಲ್ಲೇಖ | ಸೂಚನೆ 2 ಉಲ್ಲೇಖ | ಪರಿಶೋಧಿಸಿದ | ಪರಿಶೋಧಿಸಿದ |
| 1 | ಕಾರ್ಯಾಚರಣೆಗಳಿಂದ ಒಟ್ಟು ಆದಾಯ | 6,559 | 5,570 | 20,859 | 19,390 | 7,007 | 5,893 | 22,683 | 21,024 |
| 2 | ತೆರಿಗೆ ಮುಂಚಿನ ಈ ಅವಧಿಯ ನಿವ್ವಳ ಲಾಭ | 1673 | 1603 | 5233 | 5,250 | 1709 | 1647 | 5421 | 5,302 |
| 3 | ತೆರಿಗೆ ನಂತರದ ಈ ಅವಧಿಯ ನಿವ್ವಳ ಲಾಭ | 1309 | 1245 | 3950 | 4,012 | 1338 | 1279 | 4095 | 4,009 |
| 4 | ಈ ಅವಧಿಯ ಒಟ್ಟಾರೆ ಸಮಗ್ರ ಆದಾಯ (ತೆರಿಗೆ ನಂತರದ ಲಾಭ ಮತ್ತು ತೆರಿಗೆ ನಂತರದ ಇತರೆ ಸಮಗ್ರ ಆದಾಯ ಒಳಗೊಂಡಿರುತ್ತದೆ) | 1303 | 1275 | 3868 | 4018 | 1187 | 1,319 | 3,940 | 4,175 |
| 5 | ಪಾವತಿತ ಈಕ್ವಿಟಿ ಷೇರು ಬಂಡವಾಳ | 200 | 200 | 200 | 200 | 200 | 200 | 200 | 200 |
| 6 | ಒಟ್ಟು ಮೀಸಲುಗಳು | | | 19,001 | 16,733 | | | 21,011 | 18,671 |
| 7 | ಪ್ರತಿ ಷೇರಿನ ಗಳಿಕೆ (ಇಪಿಎಸ್) (ಈ ಅವಧಿಗೆ - ವಾರ್ಷಿಕಗೊಳಿಸದ) (ಪ್ರತಿಯೊಂದಕ್ಕೂ ರೂ.10/-) ಮೂಲ ಮತ್ತು ದುರ್ಬಲಗೊಳಿಸಿದ ಇಪಿಎಸ್: (ರೂ.) | 65.46 | 62.25 | 197.49 | 200.58 | 66.93 | 63.96 | 204.77 | 200.45 |

**ಸೂಚನೆ:** 1) ಮೇಲ್ಕಂಡ ವಿವರಣೆಯು ಸೆಬಿ (ಲಿಸ್ಟಿಂಗ್ ಮತ್ತಿತರ ಘೋಷಣಾ ಅಗತ್ಯಗಳು) ನಿಬಂಧನೆಗಳು, 2015ರ 33ನೇ ನಿಬಂಧನೆಯಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ಗಳಿಗೆ ಸಲ್ಲಿಸಿದ ವಿಸ್ತೃತ ತ್ರೈಮಾಸಿಕ/ವಾರ್ಷಿಕ ಪರಿಶೋಧಿಸಿದ ವಿತ್ತೀಯ ಫಲಿತಾಂಶಗಳ ಸಾರಾಂಶವಾಗಿದೆ. ತ್ರೈಮಾಸಿಕ ಅವಧಿಗೆ ಪರಿಶೋಧಿಸದ/ವಾರ್ಷಿಕವಾಗಿ ಪರಿಶೋಧಿಸಿದ ವಿತ್ತೀಯ ಫಲಿತಾಂಶಗಳ ಪೂರ್ಣ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್: **www.bseindia.com, www.nseindia.com** ಮತ್ತು ಕಂಪನಿಯ ವೆಬ್‌ಸೈಟ್: **www.wendtindia.com** ಗಳಲ್ಲಿ ಲಭ್ಯವಿದೆ.
2) ಮಾರ್ಚ್ 31, 2024 ಮತ್ತು ಮಾರ್ಚ್ 31, 2023ಕ್ಕೆ ಕೊನೆಗೊಂಡ ತ್ರೈಮಾಸಿಕ ಅಂಕಿಅಂಶಗಳು ಕ್ರಮವಾಗಿ ಮಾರ್ಚ್ 31, 2024 ಮತ್ತು ಮಾರ್ಚ್ 31, 2023ಕ್ಕೆ ಕೊನೆಗೊಂಡ ಪೂರ್ಣ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯ ಅಂಕಿಅಂಶಗಳ ನಡುವಿನ ಸಮತೋಲನದ ಅಂಕಿಅಂಶಗಳಾಗಿವೆ ಮತ್ತು ಶಾಸನಬದ್ಧ ಲೆಕ್ಕ ಪರಿಶೋಧಕರಿಂದ ಪರಿಶೀಲನೆಗೆ ಒಳಪಟ್ಟಿರುವ ಆಯಾ ಹಣಕಾಸು ವರ್ಷಗಳ ಮೂರನೇ ತ್ರೈಮಾಸಿಕದವರೆಗಿನ ಅಂಕಿಅಂಶಗಳನ್ನು ಪ್ರಕಟಿಸಲಾಗಿದೆ.
3) ನಿರ್ದೇಶಕರ ಮಂಡಳಿಯು ಪ್ರತಿ ಷೇರಿಗೆ ರೂ.20/-ರಷ್ಟು ಅಂತಿಮ ಲಾಭಾಂಶವನ್ನು ಶಿಫಾರಸು ಮಾಡಿದೆ (ಪ್ರತಿ ರೂ.10/-ರ ಈಕ್ವಿಟಿ ಷೇರಿನ ಮುಖಬೆಲೆಯ ಮೇಲೆ 200%). 2023-24ರ ಒಟ್ಟು ಲಾಭಾಂಶವು ಪ್ರತಿ ಷೇರಿಗೆ ರೂ.50/-ರಷ್ಟು ಆಗಿದೆ (ಪ್ರತಿ ರೂ.10/-ರ ಈಕ್ವಿಟಿ ಷೇರಿನ ಮುಖಬೆಲೆಯ ಮೇಲೆ 500%) ಜನವರಿ 19, 2024ರ ಮಂಡಳಿಯ ಸಭೆಯಲ್ಲಿ ಘೋಷಿಸಿದ ಮತ್ತು ನಂತರ ಪಾವತಿಸಿದ ಪ್ರತಿ ಷೇರಿಗೆ ರೂ.30/-ರಷ್ಟು ಮಧ್ಯಂತರ ಭಾಗಿಸಿ (ಪ್ರತಿ ರೂ.10/-ರ ಈಕ್ವಿಟಿ ಷೇರಿನ ಮುಖಬೆಲೆಯ ಮೇಲೆ 300%) ಸೇರಿದಂತೆ ಅಂತಿಮವಾಗಿ ಭಾಗಿಸಿದ ಪಾವತಿಯು ಕಂಪನಿಯ ನಂತರದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಷೇರುದಾರರ ಅನುಮೋದನೆಗೆ ಒಳಪಟ್ಟಿರುತ್ತದೆ.

ಸ್ಥಳ: ಹೊಸೂರು
ದಿನಾಂಕ: 25.04.2024
**ವೆಂಡ್ಟ್ (ಇಂಡಿಯಾ) ಲಿಮಿಟೆಡ್**ಗಾಗಿ ಹಾಗೂ ಪರವಾಗಿ
ಸಹಿ/- ಶ್ರೀಕಾಂತ್. ಸಿ., ಕಾರ್ಯನಿರ್ವಾಹಕ ನಿರ್ದೇಶಕರು & ಸಿಇಒ

# ಬುಡಾ ಆಯುಕ್ತ ಸೇರಿ 6 ಜನ ಲೋಕಾ ಬಲೆಗೆ

■ **ವಿಕ ಸುದ್ದಿಲೋಕ** ಬಳ್ಳಾರಿ

ಲೇಔಟ್ ಅಭಿವೃದ್ಧಿಗೆ ಪರವಾನಗಿ ನೀಡಲು 5 ಲಕ್ಷ ರೂ. ಲಂಚ ಸ್ವೀಕರಿಸಿದ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ರಮೇಶ್ ವಟಗಲ್ ಸೇರಿ ಆರು ಅಧಿಕಾರಿಗಳು, ಲೋಕಾಯುಕ್ತರ ಬಲೆಗೆ ಗುರುವಾರ ಬಿದ್ದಿದ್ದಾರೆ.

20 ಎಕರೆ ಭೂಮಿ ಅಭಿವೃದ್ಧಿಗೆ ತಾತ್ಕಾಲಿಕ ಅನುಮೋದನೆ ನೀಡಲು ಬಳ್ಳಾರಿಯ ರಿಯಲ್ ಎಸ್ಟೇಟ್ ಉದ್ಯಮಿ ವೀರೇಶ್ ಅವರಿಗೆ ಬುಡಾ ಆಯುಕ್ತ ರಮೇಶ್ ವಟಗಲ್, ಅಧಿಕಾರಿ ಮತ್ತು ಸಿಬ್ಬಂದಿ ಒಟ್ಟು 6 ಲಕ್ಷ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ವೀರೇಶ್ ಅವರು ಲೋಕಾಯುಕ್ತ ಪೊಲೀಸರಿಗೆ ಬುಧವಾರ ದೂರು ನೀಡಿದ್ದರು. ಈ ದೂರು ಆಧರಿಸಿ, ಬುಡಾ ಕಚೇರಿಗೆ ಲೋಕಾಯುಕ್ತ ಎಸ್ಪಿ ಸಿದ್ದರಾಜು ಹಾಗೂ ಡಿವೈಎಸ್ಪಿ ವಸಂತ್ ಕುಮಾರ್ ನೇತೃತ್ವದಲ್ಲಿ ದಾಳಿ ನಡೆದಿದೆ. ಲಂಚ ಸ್ವೀಕರಿಸುತ್ತಿದ್ದಾಗಲೇ ಆಯುಕ್ತ ರಮೇಶ್ ವಟಗಲ್ ಅವರನ್ನು ಲೋಕಾಯುಕ್ತರು ಬಂಧಿಸಿದ್ದಾರೆ.

''ಆರು ಜನರಿಂದಲೂ ಲಂಚದ ಹಣವನ್ನು ವಶಕ್ಕೆ ಪಡೆಯಲಾಗಿದೆ. ತನಿಖೆ ಪ್ರಗತಿಯಲ್ಲಿದೆ,'' ಎಂದು ಲೋಕಾಯುಕ್ತ ಎಸ್‌ಪಿ ಸಿದ್ದರಾಜು ತಿಳಿಸಿದ್ದಾರೆ.

# ಸಾರಿಗೆ ಬಸ್ ಚಾಲಕ, ನಿರ್ವಾಹಕನ ಮೇಲೆ ಹಲ್ಲೆ

## ಬಸ್ ಸಂಚಾರ ಸ್ಥಗಿತಗೊಳಿಸಿ ದಿಢೀರ್ ಪ್ರತಿಭಟನೆ

■ **ವಿಕ ಸುದ್ದಿಲೋಕ**

ಬೈಲಹೊಂಗಲ (ಬೆಳಗಾವಿ)

ಪಟ್ಟಣದ ಕೇಂದ್ರ ಬಸ್ ನಿಲ್ದಾಣದಲ್ಲಿ ಬಸ್ ಚಾಲಕ ಮತ್ತು ನಿರ್ವಾಹಕರ ಮೇಲೆ ಹಲ್ಲೆ ನಡೆದಿದ್ದರಿಂದ ಸಾರಿಗೆ ಸಿಬ್ಬಂದಿ ಬಸ್ ಸಂಚಾರ ಸ್ಥಗಿತಗೊಳಿಸಿ ಗುರುವಾರ ಸಂಜೆ ದಿಢೀರ್ ಪ್ರತಿಭಟನೆ ನಡೆಸಿದರು.

ಸಾರಿಗೆ ಘಟಕದ ಧಾರವಾಡ ಪ್ಲಾಟ್ ಫಾರ್ಮ್‌ನಲ್ಲಿ ಬಸ್ ಚಾಲನೆಯಲ್ಲಿದ್ದಾಗ ಓಡಿ ಬಂದು ಹತ್ತಿದ ಮಹಿಳೆಯೊಬ್ಬರು ಬಸ್ ನಿಲ್ಲಿಸುವಂತೆ ತಾಕೀತು ಮಾಡಿ ಚಾಲಕ, ನಿವಾರ್ಹಕರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಆಗ ಮಾತಿಗೆ ಮಾತು ಬೆಳೆದು ಕೈ ಕೈ ಮಿಲಾಯಿಸಿದ್ದಾರೆ. ನಂತರ ಮಹಿಳೆಯ ಸಂಬಂಧಿಕರು ಬಂದು ಚಾಲಕ, ನಿರ್ವಾಹಕರನ್ನು ಹಿಗ್ಗಾಮುಗ್ಗಾ ಥಳಿಸಿ ತೀವ್ರ ಹಲ್ಲೆ ಮಾಡಿ ಗಾಯಗೊಳಿಸಿದರು.

ಇಷ್ಟಕ್ಕೆ ಸುಮ್ಮನಾಗದೆ ಸಾರಿಗೆ ಘಟಕದ ಪ್ಲಾಟ್ ಫಾರ್ಮ್ ಒಳಗಿನ ಕಂಟ್ರೋಲ್ ಪಾಯಿಂಟ್ ಗ್ಲಾಸ್ ಒಡೆದು ಗೂಂಡಾಗಿರಿ ಮೆರೆದರು. ಚಾಲಕ, ನಿರ್ವಾಹಕರ ಮೇಲೆ ಹಲ್ಲೆ ಮಾಡುತ್ತಿದ್ದವರನ್ನು ಬಿಡಿಸಲು ಹೋದವರ ಮೇಲೂ ಹಲ್ಲೆ ನಡೆಸಲಾಗಿದೆ ಎಂದು ಘಟಕದ ಸಿಬ್ಬಂದಿ 'ವಿಕ'ಗೆ ತಿಳಿಸಿದ್ದಾರೆ.

ಬಸ್ ಚಾಲಕ ಚಾಂದಸಾಬ್ ಘನಿಬಂದ, ನಿರ್ವಾಹಕ ಮಹಾದೇವ ಫಕ್ಕೀರಪ್ಪ ದ್ಯಾಮಣ್ಣವರ ಘಟನೆಯಲ್ಲಿ ತೀವ್ರ ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

**ದಿಢೀರ್ ಬಸ್ ಸ್ಥಗಿತ**

ಘಟನೆಯಿಂದ ಆಕ್ರೋಶಗೊಂಡ ಸಾರಿಗೆ ಘಟಕದ ಸಿಬ್ಬಂದಿ ದಿಢೀರ್ ಎಲ್ಲ ಬಸ್‌ಗಳ ಸಂಚಾರವನ್ನು ನಾಲ್ಕು ಗಂಟೆಗಳ ಕಾಲ ಬಂದ್ ಮಾಡಿ ಪ್ರತಿಭಟನೆ ನಡೆಸಿದರು. ಪ್ರತಿಭಟನೆಯಿಂದಾಗಿ ತಮ್ಮ ತಮ್ಮ ಹಳ್ಳಿಗಳಿಗೆ, ದೂರದ ಊರುಗಳಿಗೆ ತೆರಳಬೇಕಿದ್ದ ಪ್ರಯಾಣಿಕರು ತೊಂದರೆಗೆ ಒಳಗಾದರು. ಸಾರಿಗೆ ಸಿಬ್ಬಂದಿ ಪ್ರತಿಭಟನಾ ಮೆರವಣಿಗೆ ಮೂಲಕ ಪೊಲೀಸ್ ಠಾಣೆಗೆ ತೆರಳಿ ಹಲ್ಲೆಕೋರರ ಮೇಲೆ ಪ್ರಕರಣ ದಾಖಲಿಸಿ, ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಘಟನೆಗೆ ಸಂಬಂಧಿಸಿ ಯಕ್ಕುಂಡಿ ಗ್ರಾಮದ ಶಬ್ಬೀರ, ಇಮಾಮಹುಸೇನ, ಮೆಹಬೂಬ್, ಗೋರಿಮಾ ದಿನ್ನಿಮನಿ ಮೇಲೆ ಪ್ರಕರಣ ದಾಖಲಾಗಿದೆ.

**BEFORE THE NATIONAL COMPANY LAW TRIBUNAL BENCH AT CHENNAI COMPANY PETITION NO.15/CHE/2024**

**IN THE MATTER OF THE COMPANIES ACT, 2013**
**AND**
**IN THE MATTER OF SECTION 66 READ WITH SECTION 52 AND 61 OTHER APPLICABLE PROVISIONS OF THE COMPANIES, ACT 2013**
**AND**
**IN THE MATTER OF KOSMO ONE BUSINESS PARK PRIVATE LIMITED**

**KOSMO ONE BUSINESS PARK PRIVATE LIMITED**
(CIN: U74899TN2005PTC125377) a company incorporated under Companies Act,1956,having its registered office at Plot No 14, 3rd Main Road, Ambattur Industrial Estate, Ambattur, Chennai - 600058, Tamil Nadu, India
**Represented by Mr. Subhasish Dutta, Authorised Signatory**
**….. PETITIONER COMPANY**

**FORM NO. RSC - 4**
[Pursuant to Rule 3(3) of National Company Law Tribunal (Procedure for Reduction of Share Capital of Company) Rules, 2016]

## Publication of Notice

Notice may be taken that Company Petition No 15/CHE/2024 ('Company Petition') was presented before the National Company Law Tribunal at Chennai ('Hon'ble Tribunal'), on February 22, 2024 to obtain sanction of the Hon'ble Tribunal for reduction of share capital of Kosmo One Business Park Private Limited ('Petitioner Company' or 'Company').The Petitioner Company seeks to reduce the issued,subscribed and paid up equity share capital of the Petitioner Company from Rs 8,69,44,210 (Rupees Eight Crore Sixty Nine Lakh Forty Four Thousand Two Hundred and Ten Only) consisting of 86,94,421 equity shares of Rs 10/-(Rupees Ten Only) each fully paid up, to Rs. 4,95,58,199.70(Rupees Four Crore Ninety Five Lakh Fifty Eight Thousand One Hundred and Ninety Nine point Seven Zero only) consisting of 86,94,421 equity shares of Rs 5.70 (Rupees Five point Seven Zero) each fully paid up, by reducing the face value of each share from Rs.10/- (Rupees Ten) to Rs. 5.70/- (Rupees Five point Seven Zero) each fully paid up thereby reducing the paid-up equity share capital to the extent of Rs 3,73,86,010.30/- (Rupees Three Crore Seventy Three Lakh Eighty Six Thousand and Ten point Three Zero Only). Thereby, the Petitioner Company proposes to undertake reduction of paid- up capital to the extent of Rs. 4.30/- (Rupees Four point Three Zero) per share and pay all the equity shareholders an amount of Rs 230/- (Rupees two Hundred and Thirty only) per share, aggregating to Rs 1,99,97,16,830.00/- (Rupees One Hundred and Ninety Nine Crore Ninety Seven Lakh Sixteen Thousand Eight Hundred and Thirty only) comprising of the face value of Rs 3,73,86,010.30/- (Rupees Three Crore Seventy Three Lakh Eighty Six Thousand and Ten point Three Zero only) for the paid-up equity share capital being reduced on each share, and;

The amount of Rs 1,96,23,30,819.70/- (Rupees One Hundred and Ninety Six Crore Twenty Three Lakh Thirty Thousand Eight Hundred and Nineteen point Seven Zero only) being the difference between the total amount payable on reduction of share capital and of Rs 1,99,97,16,830.00./- (Rupees One Hundred and Ninety Nine Crore Ninety Seven Lakh Sixteen Thousand Eight Hundred and Thirty only) to all the equity shareholders and Rs 3,73,86,010.30/- (Rupees Three Crore Seventy Three Lakh Eighty Six Thousand and Ten point Three Zero only) being the aggregate face value of paid-up equity share capital being reduced, shall be reduced from the balance available in the securities premium account of the Petitioner Company (hereinafter referred to as 'Capital Reduction – Part I'); and utilizing Rs 1,36,22,02,288/- (Rupees One Hundred and Thirty Six Crore Twenty Two Lakh Two Thousand Two Hundred and Eighty Eight only) out of the balance available in the securities premium account of the Company to set off the entire accumulated losses (i.e. debit of the balance of profit and loss account) of Rs 1,36,22,02,288/- (Rupees One Hundred and Thirty Six Crore Twenty Two Lakh Two Thousand Two Hundred and Eighty Eight only) as per the limited reviewed financial statements for the period ended December 31, 2023 reflected as debit balance under "Reserves and Surplus – Retained Earnings" as a part of "Other Equity". (hereinafter referred to as 'Capital Reduction – Part II').

The notices to individual creditors have been issued. The list of creditors prepared on the January 22, 2024 by the Company is available at the registered office of the Company at Plot No. 14, 3rd Main Road,Ambattur Industrial Estate, Ambattur, Chennai – 600058, Tamil Nadu, India for inspection on all working days during 11 a.m. to 4 p.m. between Monday and Friday. If any creditor of the Company has any objection to the Company Petition or the details in the list of creditors, the same may be sent (along with supporting documents) and details about his name and address and the name and address of his authorised representative, if any, to the undersigned at the registered office of the Company at Plot No 14, 3rd Main Road, Ambattur Industrial Estate, Ambattur, Chennai – 600058, Tamil Nadu, India. If no objection is received within the time stated above, entries in the list of creditors will, in all the proceedings under the above Company Petition to reduce the share capital of the Company, be treated as correct. It may also be noted that a hearing has been fixed for Wednesday, June 5, 2024, on which the Hon'ble Tribunal shall hear the Company Petition. In case any creditor intends to attend the hearing, he should make a request along with his objections, if any.

**Dated this 26th day of April, 2024 at Chennai**
**For Kosmo One Business Park Private Limited**

**Sd/-**
**Subhasish Dutta**
**Authorised Signatory**

---

# SUPREME PETROCHEM LTD

**CIN** : L23200MH1989PLC054633
**Regd. Office** : Solitaire Corporate Park, Building No.11, 5th Floor, 167, Guru Hargovindji Marg, Andheri-Ghatkopar Link Road, Chakala, Andheri (East), Mumbai - 400093
**Tel. No.** : 022-67091900/66935927 **Fax No.** : 022-40055681
**E-mail** : investorhelpline@spl.co.in **Website** : http://www.supremepetrochem.com

**EXTRACT OF STATEMENT OF STANDALONE AUDITED FINANCIAL RESULTS FOR THE QUARTER AND YEAR ENDED MARCH 31, 2024**

**(Rs. in Lakhs except per equity share data)**

| | Particulars | Quarter Ended | | Year Ended | |
|---|---|---|---|---|---|
| | | 31.03.2024 | 31.03.2023 | 31.03.2024 | 31.03.2023 |
| | | Audited | Audited | Audited | Audited |
| 1 | Total Revenue from Operations (Net) | 1,56,284.33 | 1,38,685.32 | 5,25,334.48 | 5,28,720.47 |
| 2 | Net Profit/(Loss) for the period (before tax, Exceptional and /or Extraordinary items) | 17,656.73 | 21,488.93 | 46,821.63 | 66,688.70 |
| 3 | Net Profit/(Loss) for the period before tax (after Exceptional and /or Extraordinary items) | 17,656.73 | 21,488.93 | 46,821.63 | 66,688.70 |
| 4 | Net Profit/(Loss) for the period after tax (after Exceptional and /or Extraordinary items) | 13,150.26 | 15,933.27 | 34,684.84 | 49,813.78 |
| 5 | Total comprehensive income for the period {comprising profit / (loss) for the period (after tax) and other Comprehensive Income (after tax)} | 12,995.13 | 15,937.11 | 34,448.47 | 49,770.20 |
| 6 | Equity Share Capital | 3,760.83 | 3,760.83 | 3,760.83 | 3,760.83 |
| 7 | Reserves (excluding Revaluation Reserves) as shown in the Audited Balance Sheet of the Previous Year | - | - | 1,98,150.43 | 1,80,625.68 |
| 8 | Earnings Per Equity Share of Rs. 2/- each | | | | |
| | Basic | 6.99 | 8.47 | 18.43 | 26.49 |
| | Diluted | 6.99 | 8.47 | 18.43 | 26.49 |

**Note**

The above is an extract of the detailed format of the Audited Financial Results for the Quarter and Year ended March 31, 2024 filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015. The full format of the said Audited Financial Results are available on the website of Stock Exchanges (www.bseindia.com and www.nseindia.com) and on Company's website : **www.supremepetrochem.com**

for **Supreme Petrochem Ltd**
SD/-
**M P Taparia**
Chairperson
DIN 00112461

Place : Mumbai
Date : 24-04-2024

---

ORACLE

# ORACLE FINANCIAL SERVICES SOFTWARE LIMITED

**Registered Office:** Oracle Park, Off Western Express Highway, Goregaon (East), Mumbai - 400 063
**Tel:** + 91 22 6718 3000 **Fax:** + 91 22 6718 3001 **CIN:** L72200MH1989PLC053666
**Website:** https://investor.ofss.oracle.com **E-mail:** investors-vp-ofss_in_grp@oracle.com

**AUDITED CONSOLIDATED FINANCIAL RESULTS FOR THE THREE MONTH PERIOD AND YEAR ENDED MARCH 31, 2024**

(₹ in million, except per share data)

| Particulars | Three month period ended March 31, 2024 | Year ended March 31, 2024 | Three month period ended March 31, 2023 |
|---|---|---|---|
| Total Income from Operations | 16,424.36 | 63,729.61 | 14,705.24 |
| Net Profit for the period before tax | 7,852.44 | 30,223.35 | 6,857.66 |
| Net Profit for the period | 5,601.22 | 22,193.62 | 4,793.02 |
| Total Comprehensive Income for the period after tax | 5,512.94 | 22,301.36 | 4,769.68 |
| Equity Share Capital | 433.36 | 433.36 | 431.99 |
| Reserves excluding revaluation reserve | 78,155.05 | 78,155.05 | 74,157.08 |
| Earnings per equity share (face value ₹ 5 each, fully paid) | | | |
| (a) Basic (in ₹) | 64.64 | 256.39 | 55.48 |
| (b) Diluted (in ₹) | 64.24 | 254.76 | 55.24 |

**Notes to financial results :**

1. The audited consolidated financial results for the three month period and year ended March 31, 2024 have been reviewed by the Audit Committee and approved by the Board of Directors of the Company at its meeting held on April 24, 2024. There are no qualifications in the report issued by the Statutory Auditors.
2. **Audited standalone results for the three month period and year ended March 31, 2024**

(₹ in million)

| Particulars | Three month period ended March 31, 2024 | Year ended March 31, 2024 | Three month period ended March 31, 2023 |
|---|---|---|---|
| Total Income from Operations | 12,125.52 | 47,844.96 | 11,123.01 |
| Net profit before tax for the period | 6,502.25 | 26,361.58 | 6,973.62 |
| Net profit for the period | 4,792.41 | 20,279.19 | 5,430.56 |

3. The information provided above is the extract of the detailed format of the Financial Results of the Company for the three month period and year ended March 31, 2024, filed with the stock exchanges under the regulation 33 of the SEBI (Listing Obligations and Disclosure Requirements) Regulations, 2015. The full format of the Financial Results for the three month period and year ended March 31, 2024 are available on the stock exchange websites (www.nseindia.com and www.bseindia.com) and on the Company's website at https://investor.ofss.oracle.com.
4. The Board of Directors of the Company at its meeting held on April 24, 2024, declared an interim dividend of ₹ 240 per equity share of ₹ 5 each for the financial year 2023-24. Further, the Board of Directors has fixed Tuesday, May 7, 2024 as the Record Date for the purpose of payment of interim dividend. The interim dividend will be paid to those equity shareholders of the Company whose names appear in its Register of Members as on close of business hours of Tuesday, May 7, 2024.

For and on behalf of the Board of Directors
**Oracle Financial Services Software Limited**

**Makarand Padalkar**
**Managing Director & Chief Executive Officer**
**DIN: 02115514**

**Mumbai, India**
**April 24, 2024**

---

WENDT

# WENDT (INDIA) LIMITED

**CIN No: L85110KA1980PLC003913**
Regd Office: 105, 1st Floor, Cauvery Block, National Games Housing Complex, Koramangala, Bangalore - 560 047.

**Extract of Standalone and Consolidated Audited Financial Results for the Quarter and year ended March 31, 2024**

**(Rs in lakhs, except EPS)**

| SL No. | Particulars | Standalone Financial Results | | | | Consolidated Financial Results | | | |
|---|---|---|---|---|---|---|---|---|---|
| | | Quarter ended 31.03.2024 | Quarter ended 31.03.2023 | Year ended 31.03.2024 | Year ended 31.03.2023 | Quarter ended 31.03.2024 | Quarter ended 31.03.2023 | Year ended 31.03.2024 | Year ended 31.03.2023 |
| | | Refer Note 2 | Refer Note 2 | Audited | Audited | Refer Note 2 | Refer Note 2 | Audited | Audited |
| 1 | Total Income from Operations | 6,559 | 5,570 | 20,859 | 19,390 | 7,007 | 5,893 | 22,683 | 21,024 |
| 2 | Net Profit for the period before tax | 1673 | 1603 | 5233 | 5,250 | 1709 | 1647 | 5421 | 5,302 |
| 3 | Net Profit for the period after tax | 1309 | 1245 | 3950 | 4,012 | 1338 | 1279 | 4095 | 4,009 |
| 4 | Total Comprehensive Income for the period (Comprising Profit after tax and Other Comprehensive income after tax) | 1303 | 1275 | 3868 | 4018 | 1187 | 1,319 | 3,940 | 4,175 |
| 5 | Paid-up equity share capital | 200 | 200 | 200 | 200 | 200 | 200 | 200 | 200 |
| 6 | Total Reserves | | | 19,001 | 16,733 | | | 21,011 | 18,671 |
| 7 | Earnings Per Share (EPS) (for the period - not annualised) (of Rs.10/- each) Basic and Diluted EPS : (₹) | 65.46 | 62.25 | 197.49 | 200.58 | 66.93 | 63.96 | 204.77 | 200.45 |

**Notes**: 1) The above is an extract of the detailed format of Quarterly / Yearly audited Financial results filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The full format of the Quarterly unaudited / Yearly audited Financial Results are available on the Stock Exchange websites **www.bseindia.com**, **www.nseindia.com** & Company's website **www.wendtindia.com**.
2) The figures for the quarter ended March 31, 2024 and March 31, 2023 are the balancing figures between the audited figures in respect of the full financial year ended March 31, 2024 and March 31, 2023, respectively and the published unaudited year to date figures up to the third quarter of the respective financial years which were subjected to review by the statutory auditors.
3) The Board of Directors have recommended a final dividend of Rs.20/- per share (200 % on face value of equity shares of Rs.10/- each). The total dividend for the year 2023-24 is Rs.50/- per share (500% on face value of equity share of Rs. 10/- each) including the interim dividend of Rs. 30/- per share (300% on face value of equity share of Rs. 10/- each) declared at the Board Meeting held on January 19, 2024 and paid subsequently. The payment of final dividend is subject to the approval of the shareholders in the ensuing Annual General meeting of the company.

For and on Behalf of **Wendt (India) Limited**
**Srikanth C**
Executive Director & CEO

Place: Hosur
Date: 25.04.2024

---

TATA

# TATA CAPITAL LIMITED

Registered Office: 11th Floor, Tower A, Peninsula Business Park, Ganpatrao Kadam Marg, Lower Parel, Mumbai - 400013
CIN: U65990MH1991PLC060670
Tel No.: 022-6606 9000 Fax: 022-6656 2699 Website: www.tatacapital.com

**POSTAL BALLOT NOTICE AND E-VOTING INFORMATION**

Notice is hereby given that Tata Capital Limited ('the **Company**') is seeking approval of the Equity Shareholders ('Members') of the Company by way of postal ballot through remote e-voting on the following resolution:

| Type of Resolution | Description of Resolution |
|---|---|
| Special Resolution | Appointment of Mr. Nagaraj Ijari (DIN: 09390579) as an Independent Director |

The Postal Ballot Notice ('Notice') is available on the website of the Company at **www.tatacapital.com**, the website of the National Securities Depository Limited ('**NSDL**') at **www.evoting.nsdl.com** and on the website of the Stock Exchanges on which the Non-Convertible Debentures ('**NCDs**') of the Company are listed i.e. BSE Limited ('**BSE**') at **www.bseindia.com** and National Stock Exchange of India Limited ('**NSE**') at **www.nseindia.com**.

In compliance with the provisions of the Companies Act, 2013, and the General Circular Nos. 14/2020 dated April 8, 2020, 17/2020 dated April 13, 2020, and subsequent circulars issued in this regard, the latest being 9/2023 dated September 25, 2023, issued by the Ministry of Corporate Affairs (collectively called '**MCA Circulars**'), the Company has sent the postal ballot notice on April 24 , 2024 ONLY through electronic mode, to those Members whose e-mail addresses are registered with the Depositories and whose names are recorded in the Register of Members / List of Beneficial Owners as received by the Company from Depositories/ Link Intime India Private Limited (formerly TSR Consultants Private Limited, merged with Link Intime India Private Limited), the Company's Registrar and Transfer Agent ('**RTA**'), as on April 19, 2024 ('**Cut-off date**'), Accordingly, physical copy of the Notice along with Postal Ballot Form and pre-paid business reply envelope has not been sent to the Members for this Postal Ballot. The Company has completed dispatch of the said Notice on April 24, 2024.

The Company has engaged the services of NSDL to provide remote e-voting facility to its Members. The remote e-voting period commences on **Saturday, April 27, 2024, from 9.00 a.m. (IST)** and ends on **Sunday, May 26, 2024, at 5.00 p.m. (IST)**. The e-voting module shall be disabled by NSDL thereafter. Voting rights of the Members shall be in proportion to the equity shares held by them in the paid-up equity share capital of the Company as on Cut-off date. Once vote on a resolution is cast, the Member will not be able to change it subsequently. Please note that communication of assent or dissent of the Members would only take place through the remote e-voting system. Only those Members whose names are recorded in the Register of Members / List of Beneficial Owners maintained by the Depositories as on the Cut-off date will be entitled to cast their votes by remote e-voting.

To facilitate Members to receive this Notice electronically, the Company has made arrangements with its RTA for registration of e-mail addresses in terms of the MCA Circulars. Members who have not registered their e-mail addresses with their Depositories may register the same with the RTA on or before 5:00 p.m. on Wednesday, May 15, 2024, basis which, the NSDL will provide the Member with a copy of the Notice. The procedure to register e-mail address with the RTA and the procedure for remote e-voting is provided in the Notice.

The Board of Directors of the Company has appointed Mr. P. N. Parikh (Membership No. FCS 327, CP No. 1228) or failing him Mr. Mitesh Dhabliwala (Membership No. FCS8331, CP No. 9511) of M/s Parikh & Associates, Practicing Company Secretaries, as the Scrutinizer to scrutinize the postal ballot process in a fair and transparent manner.

The Scrutinizer will submit his report to the Chairman of the Company, or any other person authorized by the Board, after scrutiny of the votes cast, on the result of the Postal Ballot on or before Wednesday, May 29, 2024, The Scrutinizer's decision on the validity of votes cast will be final. The results of the voting conducted by Postal Ballot along with the Scrutinizer's Report will be made available on the website of the Company at **www.tatacapital.com** and on the website of NSDL at **www.evoting.nsdl.com** and intimated to BSE and NSE, where the NCDs of the Company are listed, on or before Wednesday May 29, 2024. Additionally, the result will also be placed on the notice board at the Registered Office of the Company.

In case of any queries, Members may write to the Company at **investors@tatacapital.com**. Members can also refer the Frequently Asked Questions (FAQs) for Shareholders and e-voting user manual for Shareholders available at the download section of **www.evoting.nsdl.com** or call on toll free no(s).: 022-48867000 or send a request to Mr. Anubhav Saxena, Assistant Manager - NSDL at **evoting@nsdl.com**.

By Order of the Board of Directors
For **Tata Capital Limited**
Sd/-
**Sarita Kamath**
**Head - Legal and Compliance & Company Secretary**

Place: Mumbai
Date: April 25, 2024

---

**FORM G**
**INVITATION FOR EXPRESSION OF INTEREST FOR**
**VIRGO CEMENTS LIMITED**
**OPERATING IN CEMENT MANUFACTURING BUSINESS AT MEGHALAYA**
(Under sub-regulation (1) of regulation 36A of the Insolvency and Bankruptcy Board of India (Insolvency Resolution Process for Corporate Persons) Regulations, 2016)
[ 2nd Publication ]

| SL. | RELEVANT PARTICULARS | |
|---|---|---|
| 1. | Name of the corporate debtor along with PAN & CIN/ LLP No. | Virgo Cements Limited<br>CIN NO: U26942ML1986PLC002570<br>PAN NO. AAACV9823D |
| 2. | Address of the registered office | Damas, East Garo Hills Meghalaya 793122 India. |
| 3. | URL of website | The corporate debtor does not maintain any website.<br>IBBI website link: https://ibbi.gov.in/en/resolution-plans |
| 4. | Details of place where majority of fixed assets are located | Majority of assets viz. Plant & Machinery, Land & Building, Inventory, Office Equipment, Furniture & fixtures etc. are located at the factory premises.<br>**Address of the factory :** Damas, East Garo Hills Meghalaya 793122 India. Few Machineries are stationed at the Mines area which is located 150(approx.) km away from the factory.<br>**Address of the Mines Area :** Village Chokpat, Garo Hills Meghalaya. |
| 5. | Installed capacity of main products/ services | 1050 Tonnes per day [TPD]<br>(as per records available) |
| 6. | Quantity and value of main products/ services sold in last financial year | The production in the factory hadceased from the year 2016. However, the main productsproduced & sold were as follows:<br>i) Cement<br>ii) Clinker |
| 7. | Number of employees/ workmen | NIL |
| 8. | Further details including last available financial statements (with schedules) of two years, lists of creditors are available at URL: | Interested applicants may kindly contact us at cirp.virgocements@gmail.com |
| 9. | Eligibility for resolution applicants under section 25(2)(h) of the Code is available at URL: | Interested applicants may kindly mail us at cirp.virgocements@gmail.com for the necessary details. |
| 10. | Last date for receipt of expression of interest | 11th May 2024 |
| 11. | Date of issue of provisional list of prospective resolution applicants | 21th May 2024 |
| 12. | Last date for submission of objections to provisional list | 26th May 2024 |
| 13. | Date of issue of final list of prospective resolution applicants | 5th June 2024 |
| 14. | Date of issue of information memorandum, evaluation matrix and request for resolution plans to prospective resolution applicants | 10th June 2024 |
| 15. | Last date for submission of resolution plans | 10th July 2024 |
| 16. | Process email id to submit Expression of Interest | cirp.virgocements@gmail.com |

**The readers can access the Terms & Condition and Documents to be submitted along with EoI by scanning the following QR code**

**Sd/-**
**CA Kannan Tiruvengadam**
**(Resolution Professional)**
**Virgo Cements Limited**
**Reg no: IBBI/IPA-001/IP-P00253/2017-18/10482**
**Address: "Netaji Subhas Villa"**
**18, Karunamoyee Ghat Road (Tollygunge Area), Flat 3C, Kolkata 700082, West Bengal, India**
**Authorization for Assignment is valid till 11th December 2024**
**Email: cirp.virgocements@gmail.com**

**Date : 26th April 2024**
**Place : Kolkata**

---

# BAJAJ FINANCE LIMITED

**CIN:** L65910MH1987PLC042961
**Registered Office:** Akurdi, Pune - 411 035 | **Corporate Office:** 4th Floor, Bajaj Finserv Corporate Office, Off Pune - Ahmednagar Road, Viman Nagar, Pune - 411 014 | **Tel. :** 020-71576403 **Fax:** 020-71576364
**E-mail ID:** investor.service@bajajfinserv.in | **Website:** https://www.aboutbajajfinserv.com/finance-about-us

**Extract of consolidated unaudited/audited financial results for the quarter and financial year ended 31 March 2024**

(₹ in crore)

| Sr. No. | Particulars | Quarter ended 31.03.2024 (Reviewed) | Quarter ended 31.03.2023 (Reviewed) | Year ended 31.03.2024 (Audited) | Year ended 31.03.2023 (Audited) |
|---|---|---|---|---|---|
| 1 | Revenue from operations | 14,926.21 | 11,364.01 | 54,969.49 | 41,410.16 |
| 2 | Profit before tax | 5,105.08 | 4,261.13 | 19,309.57 | 15,527.86 |
| 3 | Profit after tax | 3,824.53 | 3,157.79 | 14,451.17 | 11,507.69 |
| 4 | Total comprehensive income (Comprising profit for the period and other comprehensive income after tax) | 3,840.54 | 3,136.53 | 14,540.71 | 11,484.85 |
| 5 | Paid-up equity share capital | 123.60 | 120.89 | 123.60 | 120.89 |
| 6 | Other equity as shown in the Balance Sheet of the previous year | | | 76,571.75 | 54,251.09 |
| 7 | Earnings per share (Not annualised) (Face value of ₹ 2 each) | | | | |
| | Basic (₹) | 61.91 | 52.25 | 236.89 | 190.53 |
| | Diluted (₹) | 61.70 | 52.01 | 235.98 | 189.57 |

Key standalone financial information is given below:

(₹ in crore)

| Sr. No. | Particulars | Quarter ended 31.03.2024 (Reviewed) | Quarter ended 31.03.2023 (Reviewed) | Year ended 31.03.2024 (Audited) | Year ended 31.03.2023 (Audited) |
|---|---|---|---|---|---|
| 1 | Total Income | 12,764.43 | 9,719.15 | 46,945.98 | 35,689.81 |
| 2 | Profit before tax | 4,566.46 | 3,829.75 | 17,053.08 | 13,881.51 |
| 3 | Profit after tax | 3,401.91 | 2,837.36 | 12,644.11 | 10,289.74 |

Note: The above is an extract of the reviewed/audited financial results for the quarter and year ended 31 March 2024 which have been reviewed by the Audit Committee and approved by Board of Directors at its meeting held on 25 April 2024, and reviewed/audited by joint statutory auditors and filed with the stock exchanges under Regulation 33 and 52 of SEBI (Listing Obligations and Disclosure Requirements) Regulations, 2015, as amended. These financial results have been prepared in accordance with Indian Accounting Standards prescribed under section 133 of the Companies Act, 2013 read with the Companies (Indian Accounting Standards) Rules, 2015 as amended from time to time and other recognised accounting practices generally accepted in India along with the circulars, guidelines and directions issued by the Reserve Bank of India (RBI) and the National Housing Bank (NHB) from time to time. The full format of the aforesaid financial results is available on the website of the Company, BSE Limited and National Stock Exchange of India Limited i.e. https://www.aboutbajajfinserv.com/finance-about-us, www.bseindia.com and www.nseindia.com respectively.

BAJAJ FINSERV

By order of the Board of Directors
For **Bajaj Finance Limited**

**Rajeev Jain**
**Managing Director**

**Pune**
**25 April 2024**